ಕೊಟ್ಟಿದ್ದಾರೆಂದು ಹೇಳುತ್ತಾರೆ. ಇದುವರೆಗೂ 3 ಕೋಟಿ 47-48 ಲಕ್ಷ ರೂ.ಗಳು ಹತ್ತಿರ ವಸೂಲಾಗಿದೆ. ಖರ್ಚು ಮಾಡಿದಂಥ ಹಣ ಪೂರ್ತಿ ವಸೂಲಾದರೂ ಕೂಡ ಟೋಲ್‌ಗೇಟ್‌ನಲ್ಲಿ ಈಗಲೂ ಹಣವನ್ನು ವಸೂಲು ಮಾಡುತ್ತಲೇ ಇದ್ದಾರೆ. ಇದಕ್ಕೆ ಕಾರಣವೇನು ಸ್ವಾಮಿ?

ಶ್ರೀ ಧರ್ಮಸಿಂಗ್ :- ಮಾನ್ಯ ಅಧ್ಯಕ್ಷರೇ, ಇದು ರಾಷ್ಟ್ರೀಯ ಹೆದ್ದಾರಿಯವರು ನಿರ್ಮಾಣ ಮಾಡಿದಂಥ ಸೇತುವೆ. ಅದರಲ್ಲಿ ಈಗಾಗಲೇ 2 ಕೋಟಿ 45 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಸೇತುವೆ ಕೆಲಸ ಮುಗಿದಿದೆ. ಹಣದ ವಸೂಲಿ ಕೂಡ ಆಗಿದೆ. ಈಗಾಗಲೇ ಹಣ ವಸೂಲು ಮಾಡಿದ್ದು 3 ಕೋಟಿ 48 ಲಕ್ಷ ರೂ. ಆಗಿದೆ.

1.00 ಪಿ.ಎಂ.

ರಾಷ್ಟ್ರೀಯ ಹೆದ್ದಾರಿಯ ಅಥಾರಿಟಿಯವರು 1997ರಲ್ಲಿ ಒಂದು ಅಮೆಂಡ್‌ಮೆಂಟ್ ಮಾಡಿದ್ದಾರೆ. ರಾಷ್ಟ್ರೀಯ ಹೆದ್ದಾರಿಯ ಪರವಾಗಿ ನಿರ್ಮಿಸಲಾಗತಕ್ಕಂಥ ಸೇತುವೆಯ ಸುಂಕ, ಮತ್ತು ಹಾಗೇಯೇ ಮುಂದೆ ತೆಗೆದುಕೊಂಡು ಹೋದರೆ ಮೇಂಟೆನೆನ್ಸ್ ಸಲುವಾಗಿ ಆ್ಯಕ್ಟ್‌ಗೆ ಅಮೆಂಡ್‌ಮೆಂಟ್ ಮಾಡಿದ್ದಾರೆ. ಅದನ್ನು ಮಾಡಿದವರು ರಾಷ್ಟ್ರೀಯ ಹೆದ್ದಾರಿಯ ಅಥಾರಿಟಿಯವರು. ನಾವು ಮಾಡಿದ್ದಲ್ಲ. ಅದು ರಾಜ್ಯ ಸರ್ಕಾರದ್ದಲ್ಲ. ಕೇಂದ್ರ ಸರ್ಕಾರದ ಹಣ, ಅವರು ಖರ್ಚು ಮಾಡಿದ್ದಾರೆ. ಅದೇ ರೀತಿ ಟೋಲ್ ಕಲೆಕ್ಷನ್ ಅನ್ನು ಕಂಟಿನ್ಯೂ ಮಾಡಿದರೆ ಆ ಸೇತುವೆಯ ಮೇಂಟಿನೆನ್ಸ್‌ಗೆ ಆಗುತ್ತದೆಂದು ಅವರು ಅಮೆಂಡ್‌ಮೆಂಟ್ ಮಾಡಿದ್ದಾರೆ. ಆದ್ದರಿಂದ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :- ಇದು ನಮಗೆ ಸಂಬಂಧಪಟ್ಟದ್ದು, ನಾವು ಅಲ್ಲಿ ತಿರುಗಾಡುತ್ತೇವೆ. ಇವತ್ತು ಇಷ್ಟೆಲ್ಲಾ ಹಣ ವಸೂಲಿಯಾದರೂ ರಸ್ತೆ ರಿಪೇರಿ ಮಾಡಿಲ್ಲ, ಗುಂಡಿಗಳು ಇವೆ, ಅದು ತಮ್ಮ ಗಮನಕ್ಕೆ ಬಂದಿದೆಯೇ ಬಸ್ಸಿನಲ್ಲಿ ಯಾರಾದರೂ ಮಲಗಿದ್ದರೆ ಅಲ್ಲಿ ಹೋದ ತಕ್ಷಣ ಎಚ್ಚರವಾಗುತ್ತದೆ. ಆ ಪರಿಸ್ಥಿತಿಯಲ್ಲಿ ಆ ರಸ್ತೆಯನ್ನು ಮೇನ್‌ಟೇನ್ ಮಾಡುತ್ತಿದ್ದಾರೆ. ಅವರೇ ಮೇಂಟೇನ್ ಮಾಡಿದರೂ ಆ ರಸ್ತೆಯನ್ನೇಕೆ ದುರಸ್ತಿ ಮಾಡಿಲ್ಲ?

ಶ್ರೀ ಧರ್ಮಸಿಂಗ್ :- ದುರಸ್ತಿ ಮಾಡುವ ಅಗತ್ಯವಿದ್ದರೆ ನಾವು ಮಾಡುತ್ತೇವೆ. ನ್ಯಾಷನಲ್ ಹೈವೇ ಪರವಾಗಿ ನಾವು ಮಾಡುತ್ತೇವೆ. ಅವರು ಹಣವನ್ನು ನಮಗೆ ಮರಳಿ ಕೊಡುತ್ತಾರೆ. ಆದ್ದರಿಂದ ಅದನ್ನು ಮಾಡಿಸಿಕೊಡತಕ್ಕ ಪ್ರಯತ್ನ ಮಾಡುತ್ತೇವೆ. ಅಲ್ಲಿ ಗುಂಡಿ ಬಿದ್ದಿದ್ದರೆ ಮುಚ್ಚಿಸಲು ಆದೇಶ ಕೊಡುತ್ತೇನೆ.

ರಾಜ್ಯದಲ್ಲಿ ಅರಣ್ಯ ಭೂಮಿಯ ಒತ್ತುವರಿ

22 (228) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಪ್ರೀಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಅರಣ್ಯ ಭೂಮಿಯನ್ನು ಈವರೆವಿಗೂ ಎಷ್ಟು ಒತ್ತುವರಿ ಮಾಡಲಾಗಿದೆ; ಜಿಲ್ಲಾವಾರು ವಿವರಗಳನ್ನು ನೀಡುವುದು; (ಅರಣ್ಯ ವಲಯವಾರು ವಿವರ ನೀಡುವುದು);

ಅ) ಅಲ್ಲಿ ಒತ್ತುವರಿ ಮಾಡಿಕೊಂಡಿದ್ದ ರೈತರನ್ನು ಒಕ್ಕಲೆಬ್ಬಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ಒಕ್ಕಲೆಬ್ಬಿಸಿದ ರೈತರಿಗೆ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಿದೆಯೇ; (ವಿವರಗಳನ್ನು ನೀಡುವುದು)?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ರಾಜ್ಯದಲ್ಲಿ ಈವರೆಗೂ 117556 ಹೆಕ್ಟೇರ್ ಅರಣ್ಯ ಪ್ರದೇಶ ಒತ್ತುವರಿ ಮಾಡಲಾಗಿದೆ (ಜಿಲ್ಲಾವಾರು ವಿವರಗಳ ಪಟ್ಟಿ ಲತ್ತಿಸದೆ). ವಲಯವಾರು ವಿವರಗಳನ್ನು ಕ್ರೋಢೀಕರಿಸಿ ಒದಗಿಸಲು ಕಾಲಾವಕಾಶ ಬೇಕಾಗುತ್ತದೆ.

ಆ) ಅಂದರೆ, ದಿನಾಂಕ: 5.5.1997ರ ಸರ್ಕಾರಿ ಆದೇಶದನ್ವಯ ಸಕ್ರಮಣಕ್ಕೆ ಅರ್ಹವಲ್ಲದ ಮತ್ತು ದಿನಾಂಕ: 27.4.1978ರ ನಂತರದ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಇಲ್ಲ.

ಅರಣ್ಯ ಪ್ರದೇಶವನ್ನು ಅನಧಿಕೃತವಾಗಿ ಒತ್ತುವರಿ ಮಾಡಿರುವ ವಿವರ

ಕ್ರ.ಸಂ.	ಜಿಲ್ಲೆಯ ಹೆಸರು	ಅತಿಕ್ರಮಣದ ವಿವರ ಕುಟುಂಬಗಳ ಸಂಖ್ಯೆ	ವಿಸ್ತೀರ್ಣ (ಹೆ.ಗಳಲ್ಲಿ)
1.	ಬೆಂಗಳೂರು (ನಗರ)	326	331.770
2.	ಬೆಂಗಳೂರು (ಗ್ರಾಮಾಂತರ)	6865	5814.650
3.	ಕೋಲಾರ	2585	2520.210
4.	ಗದಗ	1712	2885.070
5.	ಹಾವೇರಿ	320	360.424
6.	ಧಾರವಾಡ	1249	1158.242
7.	ಮಂಡ್ಯ	5	24.410
8.	ಮೈಸೂರು	1182	1214.330
9.	ಚಾಮರಾಜನಗರ	410	447.270
10.	ರಾಯಚೂರು	968	1694.140
11.	ಗುಲ್ಬರ್ಗಾ	5779	6562.000
12.	ಬೀದರ್	1781	2591.038
13.	ದಾವಣಗೆರೆ	1346	1395.560
14.	ಚಿತ್ರದುರ್ಗ	826	903.800
15.	ಬಳ್ಳಾರಿ	4042	4537.230
16.	ಕೊಪ್ಪಳ	992	1447.780
17.	ಕೊಡಗು	3353	3373.729
18.	ಉಡುಪಿ	1938	1181.740
19.	ದಕ್ಷಿಣ ಕನ್ನಡ	2353	1585.036

ಕ್ರ.ಸಂ.	ಜಿಲ್ಲೆಯ ಹೆಸರು	ಅತಿಕ್ರಮಣದ ವಿವರ ಕುಟುಂಬಗಳ ಸಂಖ್ಯೆ	ವಿಸ್ತೀರ್ಣ (ಹೆ.ಗಳಲ್ಲಿ)
20.	ಚಿಕ್ಕಮಗಳೂರು	10675	14435.680
21.	ಶಿವಮೊಗ್ಗ	32876	28012.480
22.	ಬಿಜಾಪುರ	66	48.580
23.	ಬೆಳಗಾಂ	9593	12898.130
24.	ಬಾಗಲಕೋಟೆ	1793	1057.490
25.	ಹಾಸನ	1837	1333.040
26.	ತುಮಕೂರು	2613	2833.584
27.	ಉತ್ತರ ಕನ್ನಡ	40897	16938.685
	ಒಟ್ಟು	**138382**	**117556.098**

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಉತ್ತರದಿಂದ ಉದ್ಭವಿಸತಕ್ಕಂಥ ಮೂರು ಉಪ ಪ್ರಶ್ನೆಗಳಿಗೆ ನಾನು ಅವರಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ. ಮೊದಲನೆಯದಾಗಿ, ಅರಣ್ಯ ಭೂಮಿ ಮತ್ತು ರೆವಿನ್ಯೂ ಭೂಮಿಯೆಂದು ಏನು ವರ್ಗೀಕರಣವಿದೆ ಅದು ಸರಿ ಇಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅನೇಕ ಕಡೆಗಳಲ್ಲಿ ರೆವಿನ್ಯೂ ಇಲಾಖೆಯವರು ಅರಣ್ಯ ಇಲಾಖೆಗೆ ಜಮೀನನ್ನು ಹ್ಯಾಂಡ್ ಓವರ್ ಮಾಡಿದ್ದಾರೆ. ಅದು ಸರಿಯಲ್ಲ. ಅದನ್ನು ರೆವಿನ್ಯೂ ಇಲಾಖೆಯಲ್ಲೇ ಉಳಿಸಿಕೊಳ್ಳಲು ಸಾಧ್ಯವಿಲ್ಲವೇ? ತಾವೇ ಹೇಳಿರುವಂತೆ ಸುಮಾರು 1, 17,000 ಹೆಕ್ಟೇರ್ ಅರಣ್ಯ ಪ್ರದೇಶ ಒತ್ತುವರಿಯಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? There is a lot of confusion. ಇದು ರೆವಿನ್ಯೂ ಲ್ಯಾಂಡೇ ಅಥವಾ ಫಾರೆಸ್ಟ್ ಲ್ಯಾಂಡೇ ಎನ್ನತಕ್ಕದ್ದು. ಇದರ ಬಗ್ಗೆ ಕನ್‌ಫ್ಯೂಜನ್ ಇದೆ. ಎರಡನೆಯದಾಗಿ, ಉತ್ತರ ಕನ್ನಡದಲ್ಲಿ, ವಿಶೇಷವಾಗಿ ಚಿಕ್ಕಮಗಳೂರು, ಉತ್ತರ ಕನ್ನಡ, ದಕ್ಷಿಣ ಕನ್ನಡ ಇಂಥ ಕಡೆಗಳಲ್ಲೆಲ್ಲಾ ಸಣ್ಣ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಎರಡು ಗುಂಟೆ ಮೂರು ಗುಂಟೆ ಜಮೀನಿನಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅದೇ ಅವರ ಜೀವನಕ್ಕೆ ಆಧಾರವಾಗಿದೆ. ಅವರು ಎಲ್ಲಿಗೆ ಹೋಗಬೇಕು? ತಾವು ಉತ್ತರದಲ್ಲಿ 1978ರ ನಂತರದ ಒತ್ತುವರಿಯನ್ನು ತೆರವುಗೊಳಿಸುತ್ತೇವೆಂದು ಹೇಳಿದ್ದೀರಿ. ಅಂದರೆ 24 ವರ್ಷಗಳ ಹಿಂದೆ ಆಗಿರತಕ್ಕದ್ದೇನಿದೆ ಅದರ ನಂತರ ಆಗಿರತಕ್ಕದ್ದನ್ನೆಲ್ಲಾ ಒಕ್ಕಲೆಬ್ಬಿಸುತ್ತೇವೆಂದು ಹೇಳಿದ್ದೀರಿ. ಅವರಿಗೆ ಪರ್ಯಾಯವಾದ ವ್ಯವಸ್ಥೆಯನ್ನೇನಾದರೂ ಮಾಡಿದ್ದೀರಾ? ಮೂರನೆಯದಾಗಿ, ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಏನು ಪ್ರಸ್ತಾವನೆಯನ್ನು ಕಳುಹಿಸಿದ್ದೀರಾ? ಸುಪ್ರೀಮ್ ಕೋರ್ಟಿನಲ್ಲಿ ಇದು ತೀರ್ಮಾನವಾದ ಮೇಲೆ ಇದುವರೆಗೆ ಕೇಂದ್ರ ಸರ್ಕಾರದವರು ಏನೂ ಕ್ರಮ ತೆಗೆದುಕೊಂಡಿಲ್ಲ. ಸುಪ್ರೀಮ್ ಕೋರ್ಟ್‌ನವರು ಅರಣ್ಯ ಭೂಮಿಯ ಒತ್ತುವರಿ ವಿಚಾರದಲ್ಲಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಇದುವರೆಗೆ ಕೇಂದ್ರ ಸರ್ಕಾರದವರು ಸುಪ್ರೀಮ್ ಕೋರ್ಟ್‌ನ ಮುಂದೆ ಇದರ ಪುನರ್ವಿಮರ್ಶೆ ಮಾಡತಕ್ಕಂಥ ವಿಚಾರವನ್ನು ಇಟ್ಟುಕೊಂಡಿಲ್ಲ. ಕರ್ನಾಟಕಕ್ಕೆ ಇದು ಬಹಳ ಪ್ರಮುಖವಾದ ಪ್ರಶ್ನೆ. ಸುಮಾರು 150 ತಾಲ್ಲೂಕುಗಳಲ್ಲಿ ಈ ಪ್ರಶ್ನೆ ಇದೆ. ಸುಮಾರು ಒಂದೂವರೆ ಲಕ್ಷ

ಕುಟುಂಬಗಳು, ಅಷ್ಟೇ ಅನಧಿಕೃತವಾಗಿ ಐವತ್ತು ಎಕರೆ, ನೂರು ಎಕರೆ ತೆಗೆದುಕೊಂಡಿರುವವರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅರ್ಧ ಎಕರೆ, ಕಾಲು ಎಕರೆ, ಹತ್ತು ಗುಂಟೆ, ಎರಡು ಗುಂಟೆ ಜಮೀನಿನಲ್ಲಿ ಇದ್ದವರು ಎಲ್ಲಿಗೆ ಹೋಗಬೇಕು? ಅವರಿಗೆ ನೀವು ಏನಾದರು ಪರ್ಯಾಯವಾದ ಸ್ಕೀಮ್ ಮಾಡಿದ್ದೀರಾ? ಸರ್ಕಾರದ ನಿರ್ಲಕ್ಷ್ಯವನ್ನು ನಾನು ನೋಡುತ್ತಿರತಕ್ಕದ್ದು, What is it that the State Government is thinking of? ಎಲ್ಲಾ ಕಡೆಗಳಲ್ಲಿ ಚಳುವಳಿಗಳು ಆಗುತ್ತಿವೆ. ಚಿಕ್ಕಮಗಳೂರು, ಶಿವಮೊಗ್ಗ, ಕಾರಾವಾರದಲ್ಲಾಯಿತು. ಕ್ಯಾಬಿನೆಟ್ ಸಬ್ ಕಮಿಟಿಯನ್ನೇನಾದರು ಮಾಡಿದ್ದೀರಾ? ಸಬ್ ಕಮಿಟಿಯಲ್ಲಿ ಏನಾದರೂ ತೀರ್ಮಾನ ಆಗಿದೆಯೇ? ಭಾರತ ಸರ್ಕಾರಕ್ಕೆ ಏನಾದರೂ ಅಪ್ರೋಚ್ ಮಾಡಿದ್ದೀರಾ? ಇವತ್ತಿನ ದಿವಸ ಅನೇಕರು ಅರಣ್ಯ ಭೂಮಿಯಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅವರಿಗೆ ಪರ್ಯಾಯವಾಗಿ ಮನೆ ಕಟ್ಟಲು ಏನಾದರೂ ವಿಚಾರ ಮಾಡಿದ್ದೀರಾ? ಈ ಮೂರು ಉಪ ಪ್ರಶ್ನೆಗಳಿಗೆ ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ :- ಮಾನ್ಯ ಅಧ್ಯಕ್ಷರೇ, ಒತ್ತುವರಿಯಾಗಿರತಕ್ಕಂಥ ಭೂಮಿ ಅರಣ್ಯ ಇಲಾಖೆಗೆ ಸೇರಿರತಕ್ಕ ಭೂಮಿ. ಅದು ಸರ್ಕಾರದ ಭೂಮಿ. ರೆವಿನ್ಯೂ ಇಲಾಖೆಯ ಭೂಮಿಯಲ್ಲ. ಮಾನ್ಯ ಸದಸ್ಯರೇನು ಎರಡು ಗುಂಟೆ ಮೂರು ಗುಂಟೆ ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಹೇಳಿದರು., ಅದು ವಾಸ್ತವಾಂಶ. ಆ ವಾಸ್ತವಾಂಶವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕೆಂದು ವಿಚಾರ ಮಾಡಿದ್ದೇವೆ. ಮತ್ತೆ ಅನಿವಾರ್ಯವಾದಂಥ ಪರಿಸ್ಥಿತಿಗೆ ಸರ್ಕಾರ ಒಳಗಾಗಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರ ಬರೆದಿರುವುದರಿಂದ ಅದರ ಪ್ರಕಾರ ಮಾಡಬೇಕಾಗುತ್ತದೆ. ಅದಕ್ಕಾಗಿ ಪ್ರೋಸೆಸ್ ಪ್ರಾರಂಭವಾಗಿದೆ, ಏನು ಹೇಗೆ ಮಾಡಬೇಕು ಎಂಬುದು ನಡೆಯುತ್ತಿದೆ. ಆದಾಗ್ಯೂ ಮಾನ್ಯ ಸಿಂಧ್ಯಾರವರೇನು ಪ್ರಸ್ತಾಪ ಮಾಡಿದ್ದಾರೆ ಅದು ವಾಸ್ತವಾಂಶ. ನಾವು ರೇಂಜ್ ವೈಸ್ ಎಲ್ಲೆಲ್ಲಿ ಏನೇನು ಆಗಿದೆ ಎಂಬ ಬಗ್ಗೆ ಮಾಹಿತಿ ತರಿಸಿದ್ದೇವೆ. ಅದನ್ನು ಹೇಗೆ ಮಾಡಬೇಕೆಂದು ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕೆಂದೂ, ಸಾಧ್ಯವಾದರೆ ಸುಪ್ರೀಮ್ ಕೋರ್ಟಿನ ಗಮನಕ್ಕೂ ತಂದು ನಾವು ಹೇಗೆ ಮಾಡಬೇಕು ಎಂಬ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣವೇ, ಮಂತ್ರಿ ಮಂಡಲದ ಒಂದು ಸಬ್ ಕಮಿಟಿಯನ್ನು ನೇಮಕಾತಿ ಮಾಡಲಾಯಿತು. ಅಲ್ಲಿ ಸಹ ಪ್ರಸ್ತಾಪ ಮಾಡುತ್ತೇವೆ. ಈಗ ಮತ್ತೆ ಅದನ್ನು ಎಕ್ಸ್‌ಟೆಂಡ್ ಮಾಡಿದ್ದೇವೆ. ಯಾವ್ಯಾವ ಜಿಲ್ಲೆ ಇದಕ್ಕೆ ಒಳಗಾಗಿದೆ ಆ ಜಿಲ್ಲೆಯಲ್ಲಿರುವ ಒತ್ತುವರಿಗೆ ಸಂಬಂಧಪಟ್ಟಂತೆ ಜಿಲ್ಲೆಯ ಸಂಬಂಧಪಟ್ಟ ಮಂತ್ರಿಗಳು ಏನಿದ್ದಾರೆ ಅವರ ಜೊತೆ ಸಹ ಪ್ರಸ್ತಾಪ ಮಾಡಬೇಕೆಂದಾಗಿದೆ. ಆ ಸಮಿತಿ ಮೊನ್ನೆ ತಾನೇ ನೇಮಕವಾಗಿದೆ, ಅದರ ಮೊದಲ ಸಭೆಯನ್ನು ಇಷ್ಟರಲ್ಲೇ ಮಾಡುತ್ತೇವೆ. ಪರ್ಯಾಯ ವ್ಯವಸ್ಥೆ ಮಾಡುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಒತ್ತುವರಿಯಾಗಿರತಕ್ಕದ್ದು ಅರಣ್ಯ ಭೂಮಿಯಾಗಿರುವುದರಿಂದ, ಸರ್ಕಾರದ ಭೂಮಿಯನ್ನು ಒತ್ತುವರಿ ಮಾಡಿದವರಿಗೆ ಪರ್ಯಾಯ ವ್ಯವಸ್ಥೆ ಮಾಡಲು ಎಲ್ಲಿ ಅವಕಾಶವಿದೆ? ಉದಾಹರಣೆಗೆ, ಉತ್ತರ ಕನ್ನಡದಲ್ಲಿ ಎಲ್ಲಾ ಭೂಮಿಯೂ ಅರಣ್ಯಕ್ಕೆ ಸೇರಿರತಕ್ಕದ್ದಾಗಿರುತ್ತದೆ.

ಚಿಕ್ಕಮಗಳೂರಿನ ಮೂಡಿಗೆರೆ ತಾಲ್ಲೂಕಿನಲ್ಲಿ ಒತ್ತುವರಿಯಾಗಿ ಕೊಪ್ಪದಲ್ಲಿ ಒತ್ತುವರಿಯಾಗಿದ್ದರೆ ಮತ್ತೊಂದು ಕಡೆ ಆಗಿದ್ದರೆ ಎಲ್ಲಾ ಭೂಮಿಯೂ ಅರಣ್ಯ ಭೂಮಿ ಆಗಿರುತ್ತದೆ. ಅವನಿಗೆ ಪರ್ಯಾಯವಾಗಿ ಕೊಡಬೇಕೆಂದರೆ ಎಲ್ಲಿ ಕೊಡಬೇಕು? ಬೇರೆ ಕಡೆಯಲ್ಲಿ ಕೊಡಬೇಕು, ಆದರೆ ಅವನು ಅಲ್ಲಿಗೆ ಹೋಗಲು ತಯಾರಿರುವುದಿಲ್ಲ ಈ ಸಮಸ್ಯೆ ಇದೆ, ತಾವೇನು ಸಣ್ಣ ಸಣ್ಣ ಭೂಮಿಯನ್ನು ಸಾಧಾರಣ ಜನರು ಒತ್ತುವರಿ ಮಾಡಿಕೊಂಡಿದ್ದಾರೆಂದು ಪ್ರಸ್ತಾಪ ಮಾಡಿದ್ದೀರಿ. ಅದೆಲ್ಲಾ ಮನೆಗೋಸ್ಕರವೇ ಹೆಚ್ಚು ಒತ್ತುವರಿಯಾಗಿರತಕ್ಕದ್ದು ಇದೆ. ವ್ಯಾಲಿನಲ್ಲಿ ಸಣ್ಣ ಪುಟ್ಟ ಗದ್ದೆ, ಬಂದರೆ ಅಲ್ಲಿ ಒಂದು ಎಕರೆ, ಅರ್ಧ ಎಕರೆ ಒತ್ತುವರಿ ಮಾಡಿಕೊಂಡಿರುತ್ತಾನೆ. To sustain himself ಅವನು ಬದುಕುವುದಕ್ಕೋಸ್ಕರ ಮಾಡಿಕೊಂಡಿರುತ್ತಾನೆ. ಅವುಗಳನ್ನೆಲ್ಲಾ ಗಮನಕ್ಕೆ ತಂದುಕೊಂಡು ನಾವು ಏನು ಮಾಡಬೇಕೆಂಬುದನ್ನೂ ವಿಚಾರ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋದ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ಹಿರಿಯ ಸಚಿವರು ಈಗಾಗಲೇ ಕೆಲವು ವಿಷಯಗಳನ್ನು ಸ್ಪಷ್ಟೀಕರಣ ಮಾಡಿದ್ದಾರೆ. ಸುಪ್ರೀಮ್ ಕೋರ್ಟ್‌ನಲ್ಲಿ ಇದರ ಬಗ್ಗೆ ತೀರ್ಪು ಆದಮೇಲೆ, ರಾಜ್ಯ ಸರ್ಕಾರ ಅಂಡರ್ ಟೇಕಿಂಗ್‌ನ್ನು ಬರೆದುಕೊಟ್ಟಿದೆ. ಮೇ 31ರ ಒಳಗಾಗಿ ನಾವು ಎಲ್ಲರನ್ನೂ ತೆರವು ಮಾಡುತ್ತೇವೆಂದು ಅಂಡರ್ ಟೇಕಿಂಗ್‌ನ್ನು ಕೊಟ್ಟಿದೆ. ಇದು ನಿಜವೇ? ಆ ರೀತಿ ಬರೆದುಕೊಟ್ಟಿದ್ದು ನಿಜವಾಗಿದ್ದರೆ, ಈ ವರ್ಷದ ಮೇ 31ರ ಒಳಗಾಗಿ ಎಲ್ಲರನ್ನೂ ನೀವು ತೆರವು ಮಾಡುವುದಾದರೆ, ಅವರಿಗೆ ಸ್ವಲ್ಪ ಆಲ್ಟರ್‌ನೇಟೀವ್ ವ್ಯವಸ್ಥೆ ಮಾಡದೇ ಇದ್ದರೆ ಲಕ್ಷಾಂತರ ಜನ ಒತ್ತುವರಿ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ, ಅವರಿಗೆ ಅನ್ಯಾಯವಾಗುತ್ತದೆ. ಅದಕ್ಕಾಗಿ ಏನು ವಿಚಾರ ಮಾಡಿದ್ದೀರಿ? ಸುಪ್ರೀಮ್ ಕೋರ್ಟ್‌ಗೆ ಪುನರ್ಪರಿಶೀಲನೆ ಸಲುವಾಗಿ ಅರ್ಜಿ ಕೊಡುವಂಥದ್ದು ಆಗಬೇಕು, ಇದರ ಬಗ್ಗೆ ಏನಾದರೂ ವಿಚಾರ ಮಾಡಿದ್ದೀರಾ? ಈ ಅವಧಿಯ ವಿಸ್ತರಣೆಯ ಜೊತೆಗೆ, ಯಾರು ಒತ್ತುವರಿ ಮಾಡಿದ್ದಾರೆ ಅವರಿಗೆ ಅಲ್ಲಿದ್ದ ಅರಣ್ಯಾಧಿಕಾರಿಗಳು ನೋಟೀಸ್ ಕೊಟ್ಟು ಸಿಬ್ಬಂದಿಯವರು ಒತ್ತಾಯದಿಂದ ಅವರನ್ನು ಹೊರಗೆ ಹಾಕತಕ್ಕ ಕೆಲಸ ಮಾಡುತ್ತಿದ್ದಾರೆ. ಇದರಿಂದ ಲಕ್ಷಾಂತರ ಜನರೇನು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿ ಸಾಗುವಳಿ ಮಾಡುತ್ತಿದ್ದಾರೆ ಅವರೆಲ್ಲರೂ ಅತಂತ್ರ ಸ್ಥಿತಿಯಲ್ಲಿದ್ದಾರೆ. ಇದು ನಿಲ್ಲಬೇಕು. ನೋಟಿಸ್ ಕೊಡತಕ್ಕದ್ದು, ಅವರನ್ನು ಹೊರಕ್ಕೆ ಹಾಕತಕ್ಕದ್ದು ನಿಲ್ಲಬೇಕು. ಇತ್ತೀಚೆಗೆ ಮಾನ್ಯ ಡಿ.ಬಿ. ಚಂದ್ರೇಗೌಡರು ವಾರಪತ್ರಿಕೆಯ ಸಂದರ್ಶನದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅವರಿದ್ದರೆ ಚೆನ್ನಾಗಿತ್ತು. ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಲಾರದೆ ಅವರನ್ನು ಹೊರಗೆ ಹಾಕುವುದಿಲ್ಲ ಆ ನಿಟ್ಟಿನಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ತಾವೇನು ಸಬ್ ಕಮಿಟಿ ಬಗ್ಗೆ ಹೇಳಿದ್ದೀರಿ ಅದನ್ನೇ ಅವರು ಹೇಳಿದ್ದಾರೆ. ಮಾನ್ಯ ಚಂದ್ರೇಗೌಡರು ಏನು ಹೇಳಿದ್ದಾರೆಂದರೆ, ಯಾರ ಭೂಮಿ ಯಾವುದು ಎಂಬುದು ಗೊತ್ತಿಲ್ಲ, ಇನ್ನು ಅದನ್ನು ರಕ್ಷಣೆ ಮಾಡುವುದೆಂತು? ಮೊದಲು ಜಂಟಿ ಸರ್ವೆಯಾಗಬೇಕು, ಈಗಾಗಲೇ ಅರಣ್ಯ ಇಲಾಖೆಯಿಂದ ಸರ್ವೆ ಮಾಡಿಸಿ ಮಾಹಿತಿ ತರಿಸಿಕೊಂಡಿದ್ದೇವೆ. ಕಂದಾಯ ಇಲಾಖೆಯಿಂದ ಇನ್ನೂ ಸರ್ವೆ ಕೆಲಸ ಆಗಿಲ್ಲ. ಅಲ್ಲಿಯವರೆಗೆ ಯಾರನ್ನೂ ಖುಲ್ಲಾ ಮಾಡಿಸಬೇಡಿ ಎಂದು ಈ ಸಂಬಂಧ ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಚಿವ ಸಂಪುಟದ ಉಪ ಸಮಿತಿಯ ಸಭೆಯಲ್ಲಿ ಸಂಬಂಧಿಸಿದ ಹಿರಿಯ ಅಧಿಕಾರಿಗಳಿಗೆ ಆದೇಶ ನೀಡಿದ್ದೇವೆಂದು ಹೇಳಿದ್ದಾರೆ. ಆ ರೀತಿ ಆದೇಶ ಕೊಟ್ಟಿದ್ದರೆ, ತಾವು

ಮತ್ತೆ ನೋಟೀಸ್ ಕೊಡುವುದು, ತೆರವು ಮಾಡಿಸತಕ್ಕದ್ದು ಇವೆಲ್ಲಾ ಏಕೆ ನಡೆಯುತ್ತಿದೆ? ಇದು ಅರ್ಥವಾಗುತ್ತಿಲ್ಲ. ದಯವಿಟ್ಟು ಅವರಿಗೆ ರಕ್ಷಣೆ ಕೊಡತಕ್ಕದ್ದು ಆಗಬೇಕು. ಮತ್ತು ಪರ್ಯಾಯ ವ್ಯವಸ್ಥೆಯಾಗಬೇಕು. ಪರ್ಯಾಯ ವ್ಯವಸ್ಥೆ ಹೇಗೆ ಮಾಡಲು ಆಗುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದಿರಿ. ಅವರು 30-40 ವರ್ಷಗಳಿಂದ ಮಾಡಿಕೊಂಡು ಬಂದಿದ್ದಾರೆ ಆದ್ದರಿಂದ ಮಾನವೀಯತೆಯಿಂದ, ಇವತ್ತು ಪರಿಸರ ಮತ್ತು ಮಾನವೀಯತೆ, ಬದುಕು ಮತ್ತು ಪರಿಸರ ಇವರೆಡರ ಮಧ್ಯೆ ಸಂಘರ್ಷವಿದೆ. ಇದರ ಬಗ್ಗೆ ನಾವು ಅವರಿಗೆ ಅನುಕೂಲ ಮಾಡಿಕೊಡಬೇಕು.

ಶ್ರೀ ಕೆ.ಹೆಚ್. ರಂಗನಾಥ್ :- ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರ ಅವರ ಹತ್ತಿರವೇ ಇದೆ. ಅವರು ನಮಗೆ ಸಹಾಯ ಮಾಡಿಕೊಟ್ಟರೆ ನಾನು ತಮಗೆ ಇಲ್ಲೇ ಕೈ ಮುಗಿಯುತ್ತೇನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೆ ನಾನೇನು ಕೇಳುತ್ತಿದ್ದೇನೆಂದರೆ, ಇವರು ಕ್ಯಾಬಿನೆಟ್ ಸಬ್‌ಕಮಿಟಿ ಮಾಡಿ ಒಂದು ವರ್ಷ ಆಗಿದೆ ಎಂದು ಹೇಳುತ್ತಿದ್ದಾರೆ. ಒಂದು ವರ್ಷದಲ್ಲಿ 11 ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ನೀವು ಡಂಗುರ ಹೊಡೆಯುತ್ತಿದ್ದಿರಲ್ಲಾ ಅದರಲ್ಲಿ ಒಂದೂವರೆ ಲಕ್ಷ ಮನೆಗಳನ್ನು ಈ ತರಹ ಒತ್ತುವರಿ ಮಾಡಿದವರಿಗೆ ಕಟ್ಟಿಸಿಕೊಡುತ್ತೇವೆಂದು ನೀವೇಕೆ ಹೇಳಲಿಲ್ಲ? ನನಗೆ ಗೊತ್ತಿದೆ, ರೆವಿನ್ಯೂ ಇಲಾಖೆಯ ಲ್ಯಾಂಡ್ ಯಾವುದು? ಫಾರೆಸ್ಟ್ ಡಿಪಾರ್ಟ್‌ಮೆಂಟ್ ಲ್ಯಾಂಡ್ ಯಾವುದೆಂದು ಹೇಳಿ ಇವತ್ತಿನವರೆಗೆ ಸರ್ವೆ ಸಹ ಆಗಿಲ್ಲ. I am not finding fault. But, the whole thing is that the machinery is not working at the ground level.

ಶ್ರೀ ವೈ.ಕೆ. ರಾಮಯ್ಯ :- ಮಾನ್ಯ ಅಧ್ಯಕ್ಷರೆ, ನನಗೂ ಮಾತನಾಡಲು ಒಂದು ಅವಕಾಶ ಕೊಡಬೇಕು.

ಅಧ್ಯಕ್ಷರು :- ಮಾನ್ಯ ಮಂತ್ರಿಗಳು ಇನ್ನೂ ಉತ್ತರ ಮುಗಿಸಿಲ್ಲ. ನಿಮಗೂ ಅವಕಾಶ ಕೊಡೋಣ.

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೆ, ಸರ್ವೋಚ್ಚ ನ್ಯಾಯಾಲಯಕ್ಕೆ ಏನಾದರೂ ಈ ಬಗ್ಗೆ ಮೇಲ್ಮನವಿ ಸಲ್ಲಿಸಿದ್ದೀರಾ ಎನ್ನುವುದು ಬೇಕು. ರಿವ್ಯೂ ಪಿಟಿಷನ್ ಆದರೂ ಸಹ ಅವರು ಸಲ್ಲಿಸಿದ್ದಾರಾ ಎಂದು ಕೇಳುತ್ತಿದ್ದೇನೆ. ಕೇಂದ್ರ ಸರ್ಕಾರಕ್ಕೆ ಇವರು ಹೋಗಿ ಒಂದು ಪ್ರಸ್ತಾವನೆ ಮುಂದೆ ಇಟ್ಟಿದ್ದಾರಾ?

ಅಧ್ಯಕ್ಷರು :- ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ ಬಿಡಿ.

ಶ್ರೀ ಕೆ.ಎಚ್. ರಂಗನಾಥ್ :- ತಾವು ಚಳುವಳಿ ಮಾಡುವವರು ಇದ್ದೀರಿ. ವಿಷಯ ಸರಿಯಾಗಿ ತಿಳಿದುಕೊಂಡರೆ ಮುಂದೆ ತಮ್ಮ ಚಳುವಳಿ ಚೆನ್ನಾಗಿ ಆಗುತ್ತದೆ. ವಿಷಯವನ್ನೇ ತಿಳಿದುಕೊಳ್ಳದೆ ಚಳುವಳಿ ಮಾಡುವುದಕ್ಕೆ ಹೊರಟರೆ ಅದು ಸರಿಹೋಗುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ :- ನಾವು ನೀವು ಸೇರಿ ಚಳುವಳಿ ಮಾಡಬೇಕಾಗುತ್ತದೆ.

ಶ್ರೀ ಕೆ.ಎಚ್. ರಂಗನಾಥ್ :- ನಾವು ಚಳುವಳಿ ಮಾಡುತ್ತೇವೆ. ಕೇಂದ್ರ ಸರ್ಕಾರದಲ್ಲಿ ರಿಟ್ ನಂಬರ್ 202 ಏನಿದೆ 1995ನೇ ಇಸವಿಯದ್ದು. ಅದು ಇನ್ನೂ ತೀರ್ಮಾನವಾಗಿಲ್ಲ. ಅದರಲ್ಲಿನ ಒಂದು ಐ.ಎ. 276, ಇನ್ನೊಂದು 703, ಐ.ಎ. 276ರಲ್ಲಿ ಒಂದು ಸಣ್ಣ ವಿರಿಯಾಗೆ

ಸಂಬಂಧಪಟ್ಟಂತೆ ಇರತಕ್ಕದ್ದು. ಅದು ತಟ್‌ಕೊಳ ಫಾರೆಸ್ಟ್‌ಗೆ ಸಂಬಂಧಪಟ್ಟಿರತಕ್ಕದ್ದು. ಇನ್ನು 703 ರಾಜ್ಯದಲ್ಲಿರತಕ್ಕ ಅರಣ್ಯಕ್ಕೆ ಸಂಬಂಧಪಟ್ಟಿರತಕ್ಕದ್ದು. ಅದೂ ಕೂಡ ಏನು ಇದೆ? ಹೇಗೆ ಇದೆ ಎನ್ನುವುದನ್ನು ತರಿಸಿ ನೋಡಿಕೊಳ್ಳಬೇಕಾಗಿದೆ. ಎಲ್ಲರೂ ಕೂಡ ನಾವು ಗಾಳಿಯಲ್ಲೇ ಗುದ್ದುತ್ತಿದ್ದೇವೆ. ಪರಿಸ್ಥಿತಿ ಹಾಗಾಗಿದೆ. ನಾವು ವಾಸ್ತವಾಂಶ ಏನು ಹೇಳಿದೆ ಎಂದರೆ, 1978ರ ಪೂರ್ವದಲ್ಲಿ ಆಗಿರುವಂತಹ ಒತ್ತುವರಿಗೆ ಸಂಬಂಧಪಟ್ಟಂತೆ 19 ಸಾವಿರ ಹೆಕ್ಟೇರನ್ನು ಹಿಂದೆ ಇದ್ದಂತಹ ಸರ್ಕಾರ ಕಳುಹಿಸಿಕೊಟ್ಟಿತ್ತು. ಅದರಲ್ಲಿ 14 ಸಾವಿರ ಹೆಕ್ಟೇರನ್ನು ಅವರು ಒಪ್ಪಿಕೊಂಡಿದ್ದಾರೆ. ಅದನ್ನು ಅಂದಿನ ಮಂತ್ರಿ ಮಂಡಲದಲ್ಲಿ, ಯಾರ್ಯಾರು ಅರ್ಹರೋ ಅವರಿಗೆ ಮತ್ತೆ ಪುನರ್ ಪರಿಶೀಲನೆ ಮಾಡಿಕೊಡಬೇಕೆಂದು ತೀರ್ಮಾನಿಸಿದ್ದರು. ಅರ್ಹರಿಗೆ ಕೊಡುವುದು, ಎಲ್ಲರಿಗೂ ಕೊಡುವುದಿಲ್ಲ. 'Whether he is eligible to be granted?' ಅದರ ಪ್ರಕಾರ ಮಾಡತಕ್ಕದು ನಿಧಾನವಾಗಿದೆ. ನಾವು ಒತ್ತಾಯ ಮಾಡುತ್ತಿದ್ದೇವೆ. 1978ರ ನಂತರ ಆದಂತಹುದು. ಅದರಲ್ಲೂ ಕೂಡ 19 ಸಾವಿರದಲ್ಲಿ 14 ಸಾವಿರ ಹೆಕ್ಟೇರ್ ಎಂದು ಮಾಡಿದ್ದಾರೆ. 5 ಸಾವಿರ ಹೆಕ್ಟೇರನ್ನು ಕೇಂದ್ರ ಸರ್ಕಾರದವರು ನಿರಾಕರಣೆ ಮಾಡಿದ್ದಾರೆ. ತದನಂತರ ಕೂಡ ಒತ್ತುವರಿ ಆಗಿದೆ. ಎಷ್ಟು ಆಗಿದೆ? ಒಂದು ಲಕ್ಷದ 12 ಸಾವಿರ ಕುಟುಂಬಗಳು 98 ಸಾವಿರ ಹೆಕ್ಟೇರ್ ಭೂಮಿಯನ್ನು ಒತ್ತುವರಿ ಮಾಡಿದ್ದಾರೆಂದರೆ ಒಂದು ಕುಟುಂಬಕ್ಕೆ ಒಂದು ಹೆಕ್ಟೇರ್‌ಗೂ ಕಡಿಮೆ ಬರತಕ್ಕದ್ದು ಆಗುತ್ತದೆ. ನಾವು ಅದನ್ನು ವಿಚಾರ ಮಾಡುತ್ತಿದ್ದೇವೆ. ಅದರ ಬಗ್ಗೆ ಏನು ಮಾಡಬೇಕೆಂದು ಪರಿಶೀಲನೆ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರಕ್ಕೂ ಕೂಡ ಕಳುಹಿಸಬೇಕೆಂದು ವಿಚಾರ ಮಾಡುತ್ತಿದ್ದೇವೆ. ಮೇಲ್ಮನೆಯಲ್ಲಿ ಹೋದ ಸಭೆಯಲ್ಲಿ ಒಂದು ರೆಸಲ್ಯೂಷನ್ ಆಯಿತು. ಈ ಮನೆಯಲ್ಲೂ ಕೂಡ ಒಂದು ರೆಸಲ್ಯೂಷನ್ ಆಗಿದೆ. ನಾವು ಕೇಂದ್ರ ಸರ್ಕಾರಕ್ಕೆ ಕೇಳತಕ್ಕದ್ದು ಮತ್ತು ಸುಪ್ರೀಂ ಕೋರ್ಟ್ ಮುಂದೆ ಕೇಳತಕ್ಕದ್ದು, 202ರಲ್ಲಿ ಇನ್ನೂ ಕೂಡ ಮೇನ್ ರಿಟ್ ಪಿಟಿಷನ್ ಏನು ಇದೆ ಅದರ ಮೇಲೆ ತೀರ್ಮಾನ ಬಂದೇ ಇಲ್ಲ. ಇಂಟರಿಮ್ ಅಪ್ಲಿಕೇಶನ್ ಪ್ರಕಾರ ಆಗಿರುವುದರಿಂದ ಮಾನ್ಯ ಸದಸ್ಯರು ಏನು ಹೇಳುತ್ತಾರೆ? ನೀವು ಒತ್ತುವರಿ ಮಾಡಿದ್ದನ್ನು ಬಿಡಿಸುತ್ತಿದ್ದೀರಲ್ಲಾ ಎಂದು ಹೇಳುತ್ತಾರೆ? ಒತ್ತುವರಿ ಮಾಡಿದ್ದನ್ನು ಬಿಡಿಸಲೇ ಬೇಕಾಗುತ್ತದೆ. ಇಲ್ಲವೆಂದರೆ ಕೋರ್ಟ್ ಕಂಟೆಪ್ಟ್ ಆಗುತ್ತದೆ. ಅಲ್ಲಿ ಎಷ್ಟೆಷ್ಟು ಒತ್ತುವರಿ ಆಗಿದೆ ಎಂದು ಹೇಳಿ ಕೇಳಬೇಕು ಎಂದು ಹೇಳಿರುವುದರಿಂದ ನಾವು ಅಫಿಡವಿಟ್ ಮುಖಾಂತರ ಇಷ್ಟಿಷ್ಟು ಒತ್ತುವರಿ ಆಗಿದೆ ಎಂದು ಕೊಟ್ಟಿದ್ದೇವಷ್ಟೆ. ಅದಕ್ಕಿಂತ ಹೆಚ್ಚಾಗಿ ನಾವೇನೂ ಹೇಳಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಅರಣ್ಯ ಇಲಾಖೆಯವರು ಎಲ್ಲಾ ಕಡೆ ನೋಟೀಸ್‌ಗಳನ್ನು ಕಳುಹಿಸಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ :- ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಡಬೇಕು, ಬಹಳ ಸಾರಿ ರಿಕ್ವೆಸ್ಟ್ ಮಾಡಿಕೊಂಡಿದ್ದೇನೆ.

ಅಧ್ಯಕ್ಷರು :- ತಮಗೆ ಅವಕಾಶ ಕೊಡುತ್ತೇನೆ. ಅವರು ಮೇನ್ ಕ್ವೊಶ್ಚನ್ ಕೇಳಿರುವವರು.

ಶ್ರೀ ವೈ.ಕೆ. ರಾಮಯ್ಯ :- ರೊಟೇಟ್ ಮಾಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ.

ಅಧ್ಯಕ್ಷರು :- ಅವರು ಮೇನ್ ಕ್ವೊಶ್ಚನ್‌ನೇರ ಆದ್ದರಿಂದ ಅವರಿಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ :- ರೊಟೇಟ್ ಮಾಡಬಹುದಲ್ಲಾ ಎಂದು ಹೇಳಿ ತಮ್ಮಲ್ಲಿ ನನ್ನ ಪ್ರಾರ್ಥನೆ.

ಅಧ್ಯಕ್ಷರು :- ಆಯಿತು ತಮಗೂ ಅವಕಾಶ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಇರತಕ್ಕದ್ದು ಏನು ಎಂದರೆ ನೀವು ನೋಟೀಸನ್ನು ಎಲ್ಲರಿಗೂ ಕೊಟ್ಟಿದ್ದೀರಿ. ಅರ್ಧ ಎಕರೆ, ಒಂದು ಎಕರೆ ಇದ್ದವರಿಗೆಲ್ಲಾ ನೋಟೀಸ್ ಕೊಟ್ಟಿದ್ದೀರಿ. ಅವರೆಲ್ಲಾ ಈಗ ಮಳೆ ಬೀಳುತ್ತದೆ ಎಂದು ಹೇಳಿ ಹೊಲ ಊಳಬೇಕು ಎಂದು ಕೆಲವರು ಇರುತ್ತಾರೆ. ಉಳಬೇಕೋ ಬಿಡಬೇಕೋ? ಏನು ಮಾಡಬೇಕು? ಇದು ಮೊದಲನೆಯ ಪ್ರಶ್ನೆ. ಎರಡನೆಯ ಪ್ರಶ್ನೆ ಎಂದರೆ ಮನೆ ಕಟ್ಟಿಕೊಂಡವರು ಇದ್ದಾರೆ. ಅವರು ಎಲ್ಲಿಗೆ ಹೋಗಬೇಕು.? ಅವರಿಗೆ ಪರ್ಯಾಯವಾಗಿ ಬೇರೆ ಲ್ಯಾಂಡ್ ಇಲ್ಲ. ಅವರು ಎಲ್ಲಿಗೆ ಹೋಗಬೇಕು? ಮತ್ತು ಇನ್ನೂ ಕೆಲವು ಕಡೆ ಏನು ಆಗಿದೆ ಎಂದರೆ ಅರ್ಧ ಭಾಗ ಅರಣ್ಯ ಭೂಮಿ, ಅರ್ಧ ಭಾಗ ರೆವಿನ್ಯೂ ಭೂಮಿ. ಹಾಗಾದರೆ ಆ ಮನೆಗಳನ್ನು ಬೀಳಿಸಬೇಕಾ? ಏನು ಮಾಡಬೇಕು? ಅದಕ್ಕೋಸ್ಕರವಾಗಿ ನೀವೊಂದು ಅಶ್ಯೂರೆನ್ಸ್ ಕೊಡಿ. ರಾಜ್ಯದಲ್ಲಿ ಯಾರು ಈ ಒಂದೂವರೆ ಲಕ್ಷ ಕುಟುಂಬದಲ್ಲಿ ಸುಮಾರು 5-6 ಲಕ್ಷ ಜನ ಇದ್ದಾರೆ, ಅವರಿಗೆ ಒಂದು ಭರವಸೆ ಕೊಡಿ. ನಾವು ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸಬೇಕಾಗಿರುವುದರಿಂದ ಮತ್ತು ಕೇಂದ್ರ ಸರ್ಕಾರದಲ್ಲಿ ಸಹ ನಾವು ಹೋರಾಟ ಮಾಡಬೇಕಾಗಿರುವುದರಿಂದ, ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕೆಂದು ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ವಿಚಾರ ಇಟ್ಟುಕೊಂಡಿರುವುದರಿಂದ ಅಲ್ಲಿಯವರೆಗೂ ನಾವು ವೆಕೇಟ್ ಮಾಡುವುದಿಲ್ಲ, ಈ ವರ್ಷ ಬೆಳೆ ಹಾಕಿಕೊಳ್ಳಿ ಎಂದಾದರೂ ಹೇಳಿ. ಒಂದು ಕಡೆ ನೋಟೀಸ್ ಕೊಡುತ್ತಿದ್ದಾರೆ, ಅದರ ದುರುಪಯೋಗ ಹೇಗೆ ಆಗುತ್ತದೆ ಎಂದು ಹೇಳಿ ನಿಮ್ಮ ಗಮನಕ್ಕೆ ಬರುವುದಿಲ್ಲ. ಈಗ ಅಲ್ಲಿ ನೋಟೀಸ್ ಕೊಡುವವರು ಯಾರು? ಡಿಎಫ್ಓ ಕೊಡುತ್ತಾರಾ? ಪಿಸಿಸಿಎಫ್ ಅವರು ಕೊಡುತ್ತಾರಾ? ಅಲ್ಲಿ ನೋಟೀಸ್ ಕೊಡತಕ್ಕವರು ಒಬ್ಬ ಫೋಟಿವೇಟರ್. ಒಬ್ಬ ಫಾರೆಸ್ಟ್ ಫೋಟಿವೇಟರ್ ನೋಟೀಸ್ ತೆಗೆದುಕೊಂಡು ಹೋಗಿ ಕೊಡುತ್ತಾನೆ, ಇಲ್ಲದೇ ಇದ್ದರೆ ಒಬ್ಬ ಗಾರ್ಡ್ ತೆಗೆದುಕೊಂಡು ಹೋಗಿ ನೋಟೀಸ್ ಕೊಡುತ್ತಾನೆ. ಬೇಕಾಗಿರುವವರಿಗೆ ಕೊಡುತ್ತಾನೆ, ಬೇಡದವರಿಗೆ ಅವರ ಹತ್ತಿರ ಅವನು ದುಡ್ಡು ತೆಗೆದುಕೊಳ್ಳುತ್ತಾನೆ. ಮತ್ತು ಅವರೆಲ್ಲಾ ಭಯಭೀತರಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರ ಏನು ಕ್ರಮ ತೆಗದುಕೊಳ್ಳುತ್ತದೆ ಎಂಬ ಬಗ್ಗೆ ತಮ್ಮಿಂದ ನಿರೀಕ್ಷೆ ಮಾಡುತ್ತೇನೆ.

ಶ್ರೀ ಬಿ. ಸೋಮಶೇಖರ್ :- ಮಾನ್ಯ ಅಧ್ಯಕ್ಷರೆ, ಇದು ಬಹಳ ಸೂಕ್ಷ್ಮವಾದ ವಿಚಾರ. ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಎರಡೂ ಇಲಾಖೆಯವರು ಜಂಟಿಯಾಗಿ, ಸುಪ್ರೀಂ ಕೋರ್ಟ್‌ನವರು ಯಾವ ವರ್ಗದ ಜನರಿಗೆ ರಿಲೀಸ್ ಮಾಡಿದ್ದಾರೆ, ಕೇಂದ್ರ ಸರ್ಕಾರದಿಂದ ಎಷ್ಟು ಭೂಮಿಯನ್ನು ಹಂಚಬಹುದು ಎಂದು ಸೂಚನೆ ಕೊಟ್ಟಿದ್ದಾರೆ ಅದರ ಬಗ್ಗೆ ಇನ್ನೂ ನೀವು ಪ್ರತ್ಯೇಕವಾಗಿ ಬೈಫರ್‌ಕೇಟ್ ಮಾಡಿಲ್ಲ. ನನಗೆ ಅನ್ನಿಸುತ್ತಿದೆ, ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ಏನು ಹತ್ತಾರು ವರ್ಷಗಳಿಂದ ವಾಸ ಮಾಡುತ್ತಿದ್ದಾರೆ ಅವರಿಗೆ ನೇರವಾಗಿ ಸಹಾಯ ಮಾಡತಕ್ಕ ಅವಕಾಶ ಇದೆ. ಅದನ್ನು ಇನ್ನೂ ಸರ್ಕಾರದವರು ಐಡೆಂಟಿಫೈ ಮಾಡಿಲ್ಲ. ಮತ್ತು ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ಮನೆ ಕಟ್ಟಿಕೊಂಡಿದ್ದರೆ, ವ್ಯವಸಾಯ ಮಾಡುತ್ತಿದ್ದರೆ ಅವರನ್ನು ನಿಮ್ಮ ಅರಣ್ಯ

ಇಲಾಖೆಯವರು ಒಕ್ಕಲೆಬ್ಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ನಾನು ಹೇಳತಕ್ಕದ್ದು ಏನು ಅಂದರೆ ಸಿ ಅಂಡ್ ಡಿ ಲ್ಯಾಂಡಿನಲ್ಲಿ ಯಾರು ಮನೆ ಕಟ್ಟಿಕೊಂಡಿದ್ದಾರೆ, ವಾಸ ಮಾಡುತ್ತಿದ್ದಾರೆ ಅದು ಅರಣ್ಯ ಇಲಾಖೆಗೆ ಬರುವುದಿಲ್ಲ. ಆದರೆ ನೀವು ಹೇಳಿ. ನಮ್ಮ ಸರ್ಕಾರ ಇದ್ದಾಗಲೇ ಲ್ಯಾಂಡ್ ರೆವಿನ್ಯೂ ಆಕ್ಟ್ 1984 (ಸಿ) ಎಂದು ಒಂದು ಅಮೆಂಡ್‌ಮೆಂಟ್ ತಂದಿದ್ದೆವು. ಏನು ಅಮೆಂಡ್‌ಮೆಂಟ್ ಎಂದರೆ ಯಾರು ಸಿ ಅಂಡ್ ಡಿ ಲ್ಯಾಂಡಿನಲ್ಲಿ ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಅಂತಹವರಿಗೆ ನೇರವಾಗಿ ಮಂಜೂರಾತಿ ಮಾಡಬಹುದು, ಹಕ್ಕುಪತ್ರಗಳನ್ನು ಕೊಡಬಹುದು ಎಂದು ಹೇಳಿ ಒಂದು ಅಮೆಂಡ್‌ಮೆಂಟ್ ಮಾಡಿದ್ದೇವೆ. ಅದರ ಪ್ರಕಾರ ಇನ್ನೂ ಆಗಿಲ್ಲ. ಆದ್ದರಿಂದ ನೀವು ಬಹುಶಃ ಕನ್‌ಫ್ಯೂಸ್ ಮಾಡಿಕೊಂಡಿದ್ದೀರಿ ಅರಣ್ಯ ಇಲಾಖೆಯ ಲ್ಯಾಂಡ್ ಯಾವುದು ಸಿ ಅಂಡ್ ಡಿ ಲ್ಯಾಂಡ್ ಯಾವುದು ಎಂದು ಕನ್‌ಫ್ಯೂಸ್ ಮಾಡಿಕೊಂಡಿದ್ದೀರಿ. ಅದರ ಬದಲು ಎರಡು ಇಲಾಖೆಯವರು ಕುಳಿತು ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದರೆ ಅದನ್ನು ಪ್ರತ್ಯೇಕವಾಗಿ ವಿಂಗಡಣೆ ಮಾಡಬೇಕಾಗುತ್ತದೆ. ಅದನ್ನು ಮಾಡಬೇಕು. ನಾನೇನು ಕೇಳತಕ್ಕದ್ದು ಎಂದರೆ ಕೇಂದ್ರ ಸರ್ಕಾರದಲ್ಲಿ ಎಷ್ಟು ರಿಲೀಸ್ ಮಾಡಿದ್ದಾರೋ ಅದನ್ನಾದರೂ ಅನಧಿಕೃತವಾಗಿ ವಾಸ ಮಾಡುತ್ತಿದ್ದವರಿಗೆ ಅಧಿಕೃತ ಮಾಡಿ ಹಕ್ಕು ಪತ್ರ ಕೊಡಿ. ಇದರಿಂದ ಎಷ್ಟೋ ಸಮಸ್ಯೆಗಳು ಪರಿಹಾರ ಆಗುತ್ತದೆ. ಇನ್ನೂ ಗೊಂದಲ ಸೃಷ್ಟಿ ಆಗಿದೆ. ಅದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಬಹಳ ಪ್ರಮುಖವಾದ ವಿಚಾರ ಅದು.

ಅಧ್ಯಕ್ಷರು :- ನನಗೆ ಗೊತ್ತಿದೆ. ಮಾನ್ಯ ರಾಮಯ್ಯನವರು ನಂತರ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಅರಣ್ಯ ರೋಧನ ಆಗುತ್ತಿದೆ.

ಅಧ್ಯಕ್ಷರು :- ತಮಗೂ ಅವಕಾಶ ಕೊಡುತ್ತೇನೆ. ರಾಮಯ್ಯನವರು, ಚಿನ್ನಿಗಪ್ಪನವರು, ಆನಂತರ ಮಾನ್ಯ ಹೆಗಡೆ ಅವರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಸಿ. ಚಿನ್ನಿಗಪ್ಪ :- ನಮ್ಮ ಭಾಗದ ಸಮಸ್ಯೆಗಳನ್ನೂ ಹೇಳಬೇಕಾಗಿದೆ.

ಶ್ರೀ ವೈ.ಕೆ. ರಾಮಯ್ಯ :- ಮಾನ್ಯ ಅಧ್ಯಕ್ಷರೆ, ಇತ್ತೀಚಿನ ವರ್ಷಗಳಲ್ಲಿ ಸೈನ್ಯದ ನಿರ್ವಹಣೆಯನ್ನು ಒಂದನ್ನು ಹೊರತು ಮಾಡಿ ಉಳಿದ ಎಲ್ಲಾ ಕ್ಷೇತ್ರದಲ್ಲೂ ಕೂಡ ನ್ಯಾಯಾಲಯಗಳು, ಸರ್ಕಾರಗಳು ಇದೇ ರೀತಿ ನಡೆದುಕೊಳ್ಳಬೇಕು ಎನ್ನುವಂತಹ ತೀರ್ಮಾನ ಕೊಡುವಂತಹ ಪರಿಸ್ಥಿತಿ ಸೃಷ್ಟಿ ಆಗಿದೆ. ಸೈನ್ಯದ ನಿರ್ವಹಣೆ ಬಗ್ಗೆ ನಮ್ಮ ನ್ಯಾಯಾಲಯಗಳು ಯಾವಾಗ ತೀರ್ಪು ಕೊಡುತ್ತವೆಯೋ ಗೊತ್ತಿಲ್ಲ. But, that will be the end of everything. ಇತ್ತೀಚಿನ ದಿವಸದಲ್ಲಿ ಆಗಿರುವಂತಹ ಮೂರು ಉದಾಹರಣೆಗಳ ಬಗ್ಗೆ ಹೇಳಬೇಕಾಗಿದೆ. ಒಂದು ಕಾವೇರಿ ನೀರಿನ ವಿಚಾರ. ಕಾವೇರಿ ನದಿಯಲ್ಲಿ ನೀರು ಇದೆಯೋ ಇಲ್ಲವೋ ಇಷ್ಟು ಬಿಡಿ, ಇಷ್ಟು ದಿವಸದೊಳಗಾಗಿ ನೀರು ಬಿಡಿ, ಫಾರೆಸ್ಟ್ ಎನ್‌ಕ್ರೋಚ್‌ಮೆಂಟ್ ಎವಿಕ್ಟ್ ಮಾಡುವುದಕ್ಕೆ ಆಗುತ್ತದೋ ಇಲ್ಲವೋ? ಅದು ನಮಗೆ ಗೊತ್ತಿಲ್ಲ. ನೀವು ಇಷ್ಟು ದಿವಸದೊಳಗಾಗಿ ಎವಿಕ್ಟ್ ಮಾಡಲೇಬೇಕು. ಇದು ಎರಡನೆಯ ವಿಚಾರ. ಮೂರನೆಯದು

ಗಂಗಾ-ಕಾವೇರಿಯನ್ನು 12 ವರ್ಷದೊಳಗೇ ನೀವು ಜೋಡಣೆ ಮಾಡಲೇಬೇಕು. ಹೀಗೆ ನ್ಯಾಯಾಲಯಗಳು ಅತ್ಯಂತ ಒಳ್ಳೆಯ ದೃಷ್ಟಿಯಿಂದ ತೀರ್ಮಾನವನ್ನು ತೆಗೆದುಕೊಂಡರೂ ಕೂಡ ಅವನ್ನು ಕಾರ್ಯರೂಪಕ್ಕೆ ತರಲಿಕ್ಕೆ ಆಗದಿರುವಂತಹ ಪರಿಸ್ಥಿತಿ ನಮ್ಮಲ್ಲಿ ಸಾಕಷ್ಟು ಉಂಟಾಗಿದೆ. ಅದರಲ್ಲಿ ಇದೂ ಒಂದು. ಸ್ವಾಮಿ, ಸುಪ್ರೀಂ ಕೋರ್ಟ್ ಡಿಸಿಷನ್ ಬಂದಮೇಲೆ ಕಾವೇರಿ ಇಶ್ಯೂ ವಿಚಾರದಲ್ಲಿ ಕರ್ನಾಟಕ ಸರ್ಕಾರ ಸಾಕಷ್ಟು ದಿವಸ ಕೈಕಟ್ಟಿಕೊಂಡು ಕುಳಿತುಕೊಳ್ಳುವ ಪರಿಸ್ಥಿತಿ ಸೃಷ್ಟಿ ಆಗಿದೆ.

ಅಧ್ಯಕ್ಷರು :- ರಾಮಯ್ಯನವರೆ, ಕಾವೇರಿ ಇಶ್ಯೂಗೂ ಇದಕ್ಕೂ ಸಂಬಂಧವೇನು?

ಶ್ರೀ ವೈ.ಕೆ. ರಾಮಯ್ಯ :- ನಾನು ಉದಾಹರಣೆ ಕೊಡುತ್ತಿದ್ದೇನೆ. ಸುಪ್ರೀಂ ಕೋರ್ಟ್ ಮುಂದೆ ಸರ್ಕಾರ ಕೈಕಟ್ಟಿಕೊಂಡು ನಿಂತುಕೊಳ್ಳುವ ಪರಿಸ್ಥಿತಿ ಸೃಷ್ಟಿ ಆಯಿತು. ಮತ್ತೆ ಆ ಪರಿಸ್ಥಿತಿ ಬರಬಾರದು.

Mr. SPEAKER:- I request you not to criticise Supreme Court's decision or anything. I am very sorry. ಕಾವೇರಿಗೂ ಇದಕ್ಕೂ ಸಂಬಂಧ ಇಲ್ಲ. ಅರಣ್ಯ ಜಮೀನು ಬಗ್ಗೆ ದಯವಿಟ್ಟು ಹೇಳಿ.

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ :- ಆಯಿತು, ಕಾವೇರಿ ವಿಚಾರ ಬಿಟ್ಟು ಅರಣ್ಯ ಜಮೀನು ಬಗ್ಗೆ ಹೇಳುತ್ತೇನೆ. ಅರಣ್ಯ ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದವರನ್ನು ಇಂತಿಷ್ಟೇ ಕಾಲಾವಧಿಯೊಳಗಾಗಿ ರಾಜ್ಯ ಸರ್ಕಾರಗಳು ಆಚೆಗೆ ಹಾಕಬೇಕು ಎಂದು ಸುಪ್ರೀಂ ಕೋರ್ಟ್ ತೀರ್ಮಾನ ತೆಗೆದುಕೊಂಡಿದೆ. ಇದಕ್ಕೆ ಪರಿಹಾರ ಏನು ಎನ್ನುವುದಷ್ಟೇ ಪ್ರಶ್ನೆ? Every inch of a forest land is a central government land ರಾಜ್ಯ ಸರ್ಕಾರವಾಗಲಿ, ಮುನಿಸಿಪಾಲಿಟಿ ಆಗಲಿ, ಜಿಲ್ಲಾ ಪಂಚಾಯತ್ ಆಗಲಿ, ತಾಲ್ಲೂಕು ಪಂಚಾಯತ್ ಆಗಲಿ ಇದಕ್ಕೆ ಪರಿಹಾರವನ್ನು ಕೊಡಲಿಕ್ಕೆ ಸಾಧ್ಯತೆ ಇಲ್ಲ. ಯಾವ ಕೇಂದ್ರ ಸರ್ಕಾರದ ಫಾರೆಸ್ಟ್ ಇದೆಯೋ ಅದನ್ನು ಅವರು ರಾಜ್ಯ ಸರ್ಕಾರಕ್ಕೆ ರಿಲೀಸ್ ಮಾಡಬೇಕು. ರಾಜ್ಯ ಸರ್ಕಾರ ಆಗ ಬೇಕಾದರೆ ಅದನ್ನು ಯಾರಿಗೆ ಬೇಕಾದರೂ ಹಂಚಿಕೊಂಡು ಹೋಗಬಹುದು. ಅಲ್ಲಿಯವರೆಗೆ, ಫಾರೆಸ್ಟ್ ಲ್ಯಾಂಡ್ ಅನ್ನು ಅವರಿಗೆ ಕೊಡುವುದಕ್ಕೆ ಆಗದೆ ಇರುವಂತಹ ಪರಿಸ್ಥಿತಿ ರಾಜ್ಯ ಸರ್ಕಾರಕ್ಕೆ ಇದ್ದೇ ಇದೆ. ಇದನ್ನು ಕೇಂದ್ರ ಸರ್ಕಾರದವರು ನಿವಾರಣೆ ಮಾಡಬೇಕು. ದಯಮಾಡಿ ನಾನು ರಾಜ್ಯ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. We can seek a direction or we can make a request to the Central Government to release this land to grant. ಅವರು ಕೊಡುವುದಾದರೆ ಮಾತ್ರ ನಾವು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಎರಡನೆಯದಾಗಿ, 10 ಎಕರೆ, 20 ಎಕರೆ ಅಥವಾ 100 ಎಕರೆ ಇರುವುದನ್ನು ಬಿಟ್ಟು ಬಿಡೋಣ, ಒಂದೆರಡು ಎಕರೆಯವರು ಇದ್ದಾರೆ, ಒಂದೆರಡು ಸೆಂಟ್‌ನವರು ಇದ್ದಾರೆ, ಅವರು ಮನೆಗಳನ್ನು ಕಟ್ಟಿಕೊಂಡಿದ್ದರೆ, ಅವರನ್ನು ಏನು ಮಾಡಬೇಕು? ಸನ್ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ನಾಳೆಯಿಂದ ಬಹಳ ಗಂಭೀರವಾದ ಬರಗಾಲ ಪರಿಸ್ಥಿತಿ ಬಗ್ಗೆ ಪ್ರಸ್ತಾಪಿಸಲಿದ್ದಾರೆ. ಈ ಎರಡು ವಿಷಯಗಳು ಒಂದಕ್ಕೊಂದು ಪೂರಕವಾದವುಗಳಾಗಿವೆ.

ಒಂದು ಕಡೆ ಸುಪ್ರೀಂ ಕೋರ್ಟ್‌ನವರೇನೂ ಕಣ್ಣು ಮುಚ್ಚಿಕೊಂಡು ಈ ತೀರ್ಮಾನವನ್ನು ಕೊಟ್ಟಿಲ್ಲ. ಈಗಾಗಲೇ ನಮ್ಮ ಫಾರೆಸ್ಟ್ ಏರಿಯಾ 6-7 ಪರ್ಸೆಂಟ್‌ಗೆ ಇಳಿದಿದೆ. ಬರಗಾಲ ತಡೆಗಟ್ಟಲು ಇರುವ ಪ್ರಿವೆಂಟೀವ್ ಮೆಷರ್ಸ್ ಗಳಲ್ಲಿ ಇದೂ ಒಂದು. ಇರುವ ಫಾರೆಸ್ಟ್ ಅನ್ನು ರಕ್ಷಣೆ ಮಾಡಿಕೊಂಡು, ಅರಣ್ಯ ನಾಶವಾಗದಂತೆ ನೋಡಿಕೊಂಡು, ಮಳೆ ಬರುವ ತರಹ ಮಾಡಿ ಬರಗಾಲವನ್ನು ನಿಭಾಯಿಸುವಂತಹ ಒಂದು ಮೆಶರ್ ಕೂಡ ಇದೆ. ಆ ಒಂದು ದೃಷ್ಟಿಯಿಂದ ಸುಪ್ರೀಂ ಕೋರ್ಟ್‌ನವರು ಈ ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಒಂದು ಕಡೆ ನಾವು ಬರಗಾಲವನ್ನು ನಿಭಾಯಿಸಬೇಕು, ಮತ್ತೊಂದು ಕಡೆ ಫಾರೆಸ್ಟ್ ಅನ್ನೂ ಕೂಡ ಉಳಿಸಿಕೊಳ್ಳಬೇಕೆಂದರೆ, ಅದು ಸಾಧ್ಯವಾಗುವುದಿಲ್ಲ. ಈಗ ಅವರ ಮೇಲೆ ನಾವೋ, ನಮ್ಮ ಮೇಲೆ ಅವರೋ, ಎಲ್ಲರೂ ಸೇರಿಕೊಂಡು ಒಂದೇ ಒಂದನ್ನು ಮಾಡಲಿಕ್ಕೆ ಸಾಧ್ಯತೆ ಇದೆ. ಯಾರ್ಯಾರು ಅಲ್ಲಿಗೆ ಬಂದು ಮನೆಗಳನ್ನು ಕಟ್ಟಿಕೊಂಡಿರುತ್ತಾರೋ ಅಂತಹವರಿಗೆ ನಮ್ಮ ಸೈಟುಗಳನ್ನು ಕೊಡುವ ಆಶ್ರಯ ಯೋಜನೆ, ನವಗ್ರಾಮದ ಯೋಜನೆ ಮುಂತಾದ ಯಾವುದಾದರೂ ಯೋಜನೆಗಳಡಿಯಲ್ಲಿ ಸೈಟ್‌ಗಳನ್ನು ಕೊಡುತ್ತೇವೆ ಎನ್ನುವಂತಹ ತೀರ್ಮಾನವನ್ನು ರಾಜ್ಯ ಸರ್ಕಾರವನ್ನು ತೆಗೆದುಕೊಂಡರೆ ಮಾತ್ರ ಇದಕ್ಕೆ ಪರಿಹಾರವನ್ನು ಒದಗಿಸಲಿಕ್ಕೆ ಸಾಧ್ಯವಾಗುತ್ತದೆ. ಕೋರ್ಟಿನ ತೀರ್ಮಾನವನ್ನು ನಾವು ಅನುಸರಿಸಲೇಬೇಕಾಗಿರುವುದರಿಂದ, ಅಂತಹವರಿಗೆ ವಿವಿಧ ಯೋಜನೆಗಳಡಿಯಲ್ಲಿ ಸೈಟುಗಳನ್ನು ಕೊಡುವುದೊಂದು, ಅಂತಹವರಿಗೆ ಆಶ್ರಯ ಯೋಜನೆಯಡಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ದುಡ್ಡು ಕೊಡುವುದೊಂದು, ಈ ಎರಡು ಕೆಲಸವನ್ನು ರಾಜ್ಯ ಸರ್ಕಾರ ಮಾಡಬಹುದೇ ಹೊರತು, ರಾಜ್ಯ ಸರ್ಕಾರದಿಂದ ಬೇರೆ ಯಾವ ಕೆಲಸವನ್ನೂ ಸಹ ಮಾಡಲಿಕ್ಕಾಗುವುದಿಲ್ಲ. If you have to oblige the Court Order, you are bound to evict them.

ಶ್ರೀ ಸಿ. ಚೆನ್ನಿಗಪ್ಪ :- ಸನ್ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಬಹಳ ಗಂಭೀರವಾದುದು. ಮಾನ್ಯ ಅರಣ್ಯ ಸಚಿವರಿಗೆ ಈ ವಿಚಾರ ಗೊತ್ತಿದೆ. ಹಳ್ಳಿಯ ಬಡ ರೈತರು ಒಂದು ಎಕರೆ, ಅರ್ಧ ಎಕರೆ, ಹತ್ತು ಗುಂಟೆ, ಐದು ಗುಂಟೆಗಳಲ್ಲಿ ಇವತ್ತು ಬೋರ್ ಹಾಕಿಸಿಕೊಂಡು, ಅಡಿಕೆ ತೋಟ, ತೆಂಗಿನ ತೋಟ ಮಾಡಿಕೊಂಡು ಬೆಳೆ ಬೆಳೆಯುವಂತಹ ವಿಚಾರ ಮಾನ್ಯ ಸಚಿವರ ಗಮನಕ್ಕೆ ಬಂದಿದೆ. ಇವತ್ತು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಹಾಕುವ ವಿಚಾರ ಆಗಿರಬಹುದು, ಸೆಂಟ್ರಲ್ ಗೌರ್ನಮೆಂಟ್ ಅನ್ನು ಅಪ್ರೋಚ್ ಮಾಡಿ ಅವರಿಂದ ಪರ್ಮಿಷನ್ ತೆಗೆದುಕೊಳ್ಳುವ ವಿಚಾರ ಇರಬಹುದು, ಇವತ್ತು ಬಡ ರೈತರು ಉತ್ತುತ್ತಿರುವಂತಹ ಜಮೀನನ್ನು ಅವರಿಗೇ ಉಳಿಸಿಕೊಡಬೇಕು, ಅಲ್ಲಿ ಅವರು ಮನೆಗಳನ್ನೇನು ಇವತ್ತು ಕಟ್ಟಿಕೊಂಡಿದ್ದಾರೋ ಅದನ್ನು ಅಲ್ಲೇ ಉಳಿಸುವಂತಹ ಪರಿಸ್ಥಿತಿಗೆ ದಯಮಾಡಿ ಸರ್ಕಾರ ಅಥವಾ ಮಾನ್ಯ ಸಚಿವರು ಬರಬೇಕು ಎಂದು ತಮ್ಮ ಮುಖಾಂತರ ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಅಧ್ಯಕ್ಷರೇ, ಇದು ಬಹಳ ಕ್ಲಿಷ್ಟವಾದಂತಹ ಸಮಸ್ಯೆಯಾಗಿದೆ. ಮೊದಲಿನಿಂದಲೂ ಆಡಳಿತ ಮಾಡಿಕೊಂಡು ಬಂದಂತಹ ಸರ್ಕಾರಗಳು ಈ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡವರ ರಕ್ಷಣೆಗೆ ಇದುವರೆಗೆ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಿಲ್ಲ. 1978ಕ್ಕಿಂತ ಮೊದಲು ಅತಿಕ್ರಮಣವನ್ನು

ಯಾರು ಮಾಡಿಕೊಂಡಿದ್ದಾರೋ ಅವರಿಗೆ ಸಕ್ರಮ ಮಾಡಲಿಲ್ಲ. 1978ಕ್ಕಿಂತ ಮೊದಲಿನವರೆಗೆ ರೆಗ್ಯೂಲರೈಸ್ ಮಾಡುವುದಕ್ಕೆ Forest Conversion Actನಲ್ಲಿ ಅವಕಾಶ ಇದೆ. ಅದನ್ನೂ ಉಪಯೋಗ ಮಾಡಿಕೊಳ್ಳಲಿಲ್ಲ. 1980ರ Forest Conversion Actನ ಸೆಕ್ಷನ್ (2) ಪ್ರಕಾರ ಈ ರೀತಿ ಯಾವುದೇ ರೀತಿಯ ಅರ್ಹ ಫಲಾನುಭವಿಗಳು ಇದ್ದರೆ, ಅವರಿಗೆ ಅಗತ್ಯವಾದಂತಹ ಜಮೀನು ಬೇಕು ಎನ್ನುವಂತಹ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರ ಕಳುಹಿಸಿದರೆ ಅದರ ಮಂಜೂರಾತಿಗೆ ಅವಕಾಶ ಇದೆ, ರಾಜ್ಯ ಸರ್ಕಾರ ಈಗ ಕ್ಯಾಬಿನೆಟ್ ಉಪ ಸಮಿತಿಯನ್ನು ಮಾಡಿದೆ. ಇದು ಮೂಗಿಗೆ ತುಪ್ಪ ಹಚ್ಚುವ ಕೆಲಸವಾಗಿದೆ. ಬಡವರು, ಕೃಷಿ ಕೂಲಿ ಕಾರ್ಮಿಕರು ಅಲ್ಲಿ ತೊಂದರೆಗೊಳಗಾಗಿದ್ದಾರೆ. ಇವರು ಈ ರೀತಿ ಸಮಿತಿ, ಉಪಸಮಿತಿಗಳನ್ನು ಮಾಡುತ್ತಿರುತ್ತಾರೆಯೇ ಹೊರತು, ಬಡವರ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಇದುವರೆಗೆ ಪ್ರಾಮಾಣಿಕವಾದಂತಹ ಚಿಂತನೆ ಮಾಡಿಲ್ಲ ಎನ್ನುವುದಕ್ಕೆ ಇದು ಉದಾಹರಣೆಯಾಗಿದೆ. ನಮ್ಮ ಜಿಲ್ಲೆಯಲ್ಲಿ 40 ಸಾವಿರ ಕುಟುಂಬಗಳು ಈ ರೀತಿ ಅತಿಕ್ರಮಣ ಮಾಡಿಕೊಂಡಿವೆ. ಇದರಲ್ಲಿ 30 ಸಾವಿರ ಕುಟುಂಬಗಳದ್ದು ಬರೇ ಹೌಸ್ ಸೈಟ್ಸ್ ಅಷ್ಟೇ ಇದೆ. ನಮ್ಮ ಜಿಲ್ಲೆಯಲ್ಲಿ 80 ಪರ್ಸೆಂಟ್ ಫಾರೆಸ್ಟ್ ಲ್ಯಾಂಡ್ ಇದೆ. 20 ಪರ್ಸೆಂಟ್ ಉಳಿದಿರುವಂತಹ ಅಗ್ರಿಕಲ್ಚರಲ್ ಲ್ಯಾಂಡ್ ಇದೆ. 80 ಪರ್ಸೆಂಟ್ ಫಾರೆಸ್ಟ್ ಇರುವಂತಹ ಲ್ಯಾಂಡ್‌ನಲ್ಲಿ 30 ಸಾವಿರದಷ್ಟು ಜನ ನಿವೇಶನ ಕಟ್ಟಿಕೊಂಡಿರುವವರಿಗೆ ಇವರು ಪರ್ಯಾಯ ಭೂಮಿಯನ್ನು ಕೊಡಬಹುದು. ಲ್ಯಾಂಡ್ ಬ್ಯಾಂಕ್ ವ್ಯವಸ್ಥೆ ಇದೆ. ಬೇರೆ ಕಡೆಗಳಲ್ಲಿ ಎಲ್ಲೆಲ್ಲಿ ಸರ್ಕಾರದ ಭೂಮಿ ಇದೆಯೋ ಆ ಭೂಮಿಯನ್ನು ಫಾರೆಸ್ಟ್‌ಗೆ ಹಸ್ತಾಂತರಿಸಿ, ಈ ಫಾರೆಸ್ಟ್ ಅನ್ನು ಡಿಸ್‌ಪಾರೆಸ್ಟ್ ಮಾಡಿಕೊಂಡು ಲ್ಯಾಂಡ್ ಬ್ಯಾಂಕ ಮೂಲಕ ವ್ಯವಸ್ಥೆ ಮಾಡಬಹುದು. ಏಕೆ ಮಾಡುತ್ತಿಲ್ಲ? ಲ್ಯಾಂಡ್ ಬ್ಯಾಂಕ್ ಮೂಲಕ ಇದನ್ನು ಬದಲಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಇಷ್ಟೇ ಅಲ್ಲ, ಡಿಸ್ಟ್ರಿಕ್ಟ್‌ಗಳಲ್ಲಿ ಒಂದು ಎಂಪವರ್ಡ್ ಕಮಿಟಿ ಇದೆ. ಸ್ಟೇಟ್‌ನಲ್ಲಿ ಒಂದು ಎಂಪವರ್ಡ್ ಕಮಿಟಿ ಇದೆ. ಚೀಫ್ ಸೆಕ್ರೆಟರಿ ಅದಕ್ಕೆ ಅಧ್ಯಕ್ಷರಾಗಿದ್ದಾರೆ, ಸೆಂಟ್ರಲ್ ಎಂಪವರ್ಡ್ ಕಮಿಟಿ ಇದೆ. ಈ ಎಂಪವರ್ಡ್ ಕಮಿಟಿಗಳು ಮೇಲಿಂದ ಮೇಲೆ ಸೇರಿ ಅಲ್ಲಿ ಆರ್‌ಎಫ್‌ಒ ಗಳು ಎಷ್ಟು ಖಿಲ್ಲಾ ಮಾಡಿದ್ದಾರೆ ಎಂಬ ವರದಿಯನ್ನು ಕೇಳುತ್ತಿವೆ. ಅದರ ಜೊತೆಗೆ ಈಗಾಗಲೇ ಪ್ರಸ್ತಾಪವಾದಂತೆ ಅವರನ್ನು ಖಿಲ್ಲಾ ಮಾಡಿಸುವುದಕ್ಕೆ ನೋಟೀಸ್ ಕೊಡಿಸಿ, ಅಲ್ಲಿ ಬೆದರಿಕೆ ಉಂಟು ಮಾಡುತ್ತಿದ್ದಾರೆ. ನಮಗೆ ಸರ್ಕಾರದಿಂದ ಸ್ಪಷ್ಟವಾದಂತಹ ಭರವಸೆ ಏನು ಬೇಕು ಎಂದರೆ, ಸುಪ್ರೀಂಕೋರ್ಟ್‌ಗೆ ಇರಬಹುದು ಅಥವಾ ಕೇಂದ್ರದ ಸೆಂಟ್ರಲ್ ಎಂಪವರ್ಡ್ ಕಮಿಟಿಗೆ ಇರಬಹುದು, ಇವರು ಪ್ರಸ್ತಾವನೆಯನ್ನು ಅದಷ್ಟು ಶೀಘ್ರದಲ್ಲಿ ಕಳುಹಿಸಬೇಕು, ಅದಷ್ಟು ಶೀಘ್ರ ಅಂದರೆ, ಉಪ ಸಮಿತಿಗೆ ಮೂರು ತಿಂಗಳು ಸಮಯ ತೆಗೆದುಕೊಂಡಿದ್ದಾರೆ. ಆ ಮೂರು ತಿಂಗಳ ಸಮಯದಲ್ಲಾದರೂ ಕಳುಹಿಸಲಿ. ಈಗಾಗಲೇ ವಿಳಂಬ ಆಗಿದೆ. ಕಳೆದ ಒಂದಾರು ತಿಂಗಳಲ್ಲಿ ರಾಜ್ಯ ಹಿಂದೆಂದೂ ನೋಡದೇ ಇರುವಂತಹ ಒಂದು ಹೋರಾಟವನ್ನು ನೋಡಿದೆ, ಮಲೆನಾಡಿನ ನಮ್ಮ ಜಿಲ್ಲೆಗಳಲ್ಲಿ ಬಡವರು, ಕೃಷಿ ಕೂಲಿ ಕಾರ್ಮಿಕರು ಒಂದು ಅತ್ಯಂತ ದೊಡ್ಡ ಹೋರಾಟವನ್ನು ಮಾಡಿದ್ದಾರೆ. ಸರ್ಕಾರ ಕಣ್ಣು ತೆರೆದು ಆ ಉಪ ಸಮಿತಿಯನ್ನು ಮಾಡಿದೆ. ಆದರೆ ಆ ಉಪ ಸಮಿತಿಯ ವರದಿಯನ್ನು ವಿಳಂಬ ಮಾಡಬಾರದು. ತಕ್ಷಣ ಅದನ್ನು ಮಂಜೂರಾತಿಗೆ ಕಳುಹಿಸಿಕೊಡಬೇಕು. ಇದರ

ಜೊತೆಗೆ ಅವರನ್ನು ಸ್ಥಳದಲ್ಲಿ ಒಕ್ಕಲಿಬ್ಬಿಸುವುದಿಲ್ಲ ಎಂಬ ಭರವಸೆ ಕೊಡಬೇಕು. ಬಡವರ ಸಮಸ್ಯೆ ಕೃಷಿ ಕೂಲಿ ಕಾರ್ಮಿಕರ ಸಮಸ್ಯೆ ಇದಾಗಿದೆ. ಹಾಗಾಗಿ ಯಾವುದೇ ಕಾರಣಕ್ಕೂ ಅವರನ್ನು ಒಕ್ಕಲೆಬ್ಬಿಸುವುದಿಲ್ಲ ಎನ್ನುವುದನ್ನು ಸರ್ಕಾರದವರು ಹೇಳಬೇಕು.

ಅಧ್ಯಕ್ಷರು :- ಮಾನ್ಯ ರಂಗನಾಥರವರೇ ತಾವು ಉತ್ತರ ಹೇಳಿ.

ಶ್ರೀ ಎ. ನಾರಾಯಣಸ್ವಾಮಿ :- ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು :- ಆನೇಕಲ್‌ಗೂ ನಾರ್ತ್ ಕೆನರಾಕ್ಕೂ ಏನು ಸಂಬಂಧ ಇದೆ? ದಯವಿಟ್ಟು ತಾವು ಸಮ್ಮನೆ ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳೇ ತಾವು ದಯವಿಟ್ಟು ಉತ್ತರ ಹೇಳಿ.

ಶ್ರೀ ಎ. ನಾರಾಯಣಸ್ವಾಮಿ :- ಮಾನ್ಯ ಮಂತ್ರಿಗಳು ಈ ಕಡೆಗೆ ಗಮನ ಕೊಡಬೇಕು. ನಮ್ಮಲ್ಲಿ ಉಪಾಧ್ಯಾಯರ ಮೇಲೆ ಕೇಸ್ ಹಾಕುತ್ತಿದ್ದಾರೆ. ಇಲಾಖೆಯವರು ಅಂಗನವಾಡಿ ಟೀಚರ್ಸ್ ಮೇಲೆ ಕೇಸ್ ಹಾಕುತ್ತಿದ್ದಾರೆ. ಟೀಚರ್ಸ್ ಶಾಲೆಗಳಿಗೆ ಹೋಗುವುದಕ್ಕೆ ಭಯಭೀತರಾಗಿದ್ದಾರೆ. ಈ ಬಗ್ಗೆ ಗಂಭೀರವಾದಂತಹ ಚಿಂತನೆ ಮಾಡಬೇಕು. ನ್ಯಾಷನಲ್ ಪಾರ್ಕ್‌ನಲ್ಲಿ 20 ಹಳ್ಳಿಗಳಿವೆ. ಆ 20 ಹಳ್ಳಿಗಳಲ್ಲಿ ಬಹಳ ವರ್ಷಗಳಿಂದ ಅವರು ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ. ಶಾಲಾ ಕಟ್ಟಡ ಸಹ ಇವರೇ ಕಟ್ಟುತ್ತಾರೆ. ಆ ಶಾಲೆಗೆ ಹೋಗುವ ಟೀಚರ್ಸ್ ಅನ್ನು ಇವರೇ ಅಪಾಯಿಂಟ್ ಮಾಡುತ್ತಾರೆ. ಆ ಟೀಚರ್ಸ್‌ಗಳ ಮೇಲೆ ಇವರೇ ಕೇಸ್ ಹಾಕುತ್ತಿದ್ದಾರೆ. ಇದು ಬಹಳ ಗಂಭೀರವಾದಂತಹ ಪ್ರಶ್ನೆಯಾಗಿದೆ. ಇದೇನು ಎಂದು ನಮಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು :- ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ.ಹೆಚ್. ರಂಗನಾಥ್ :- ಎಲ್ಲರೂ ಒಟ್ಟಿಗೆ ಕೇಳಿದರೆ ಯಾರ ಪ್ರಶ್ನೆಗೆ ಉತ್ತರ ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ :- ಈಗ ಒಂದೇ ಒಂದು ಆಲ್ಟರ್‌ನೇಟಿವ್ ಇದೆ ಎಂದು ತಾವು ಹೇಳಿದಿರಿ. ಕೇಂದ್ರ ಸರ್ಕಾರಕ್ಕೆ ಸ್ಪಷ್ಟವಾದಂತಹ ಪ್ರಪೋಸಲ್ ಅನ್ನು ಏನು ತೆಗೆದುಕೊಂಡು ಹೋಗುತ್ತೀರೋ ಅದನ್ನು ದಯವಿಟ್ಟು ಕ್ಲಿಯರ್ ಮಾಡಿ. ಆಮೇಲೆ 31ನೇ ಮೇ ತಾರೀಖಿನೊಳಗೆ ತೆರವು ಮಾಡಿಸಬೇಕು ಎಂದು ನೀವು ಬರೆದು ಕೊಟ್ಟಿದ್ದೀರಿ. ಆದರ ಎಕ್ಸ್‌ಟೆನ್‌ಷನ್ ಸಲುವಾಗಿ ಅರ್ಜಿ ಕೊಡುತ್ತೀರೋ ಹೇಗೆ ಎನ್ನುವಂತಾದ್ದು ಮತ್ತು ರಿವ್ಯೂ ಪೈಲ್ ಮಾಡುತ್ತೀರೋ ಹೇಗೆ ಎಂಬ ಬಗ್ಗೆ ಹೇಳಬೇಕು. ನಿಮ್ಮ ಉತ್ತರದಲ್ಲಿ ಆಲ್ಟರ್‌ನೇಟಿವ್ ವ್ಯವಸ್ಥೆ ಇಲ್ಲ ಎಂದು ಹೇಳಿದಿರಿ. ಆದ್ದರಿಂದ ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಒಂದು ಸರಿಯಾದಂತಹ ಉತ್ತರವನ್ನು ಮಾನ್ಯ ಮಂತ್ರಿಗಳು ನೀಡಬೇಕೆಂದು ಕೋರುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ :- ನೀವು ಕುಳಿತುಕೊಂಡರೆ ನಾನು ಉತ್ತರ ಕೊಡುತ್ತೇನೆ. ತಾವು ಕೇಳುತ್ತೇಲೇ ನಿಂತುಕೊಂಡಿದ್ದರೆ ನಾನು ಹೇಗೆ ಉತ್ತರ ಹೇಳಲಿ.

ಶ್ರೀ ಜಗದೀಶ್ ಶೆಟ್ಟರ್ :- ನಾನು ಕುಳಿತುಕೊಳ್ಳುತ್ತೇನೆ, ತಾವು ಉತ್ತರ ಹೇಳಿ.

ಶ್ರೀ ಕೆ.ಹೆಚ್. ರಂಗನಾಥ್ :- ಮಾನ್ಯ ಅಧ್ಯಕ್ಷರೇ, ಫಾರೆಸ್ಟ್ ಭೂಮಿ ಇವತ್ತೂ ಕೂಡ ರಾಜ್ಯ ಸರ್ಕಾರದ್ದು, ಕೇಂದ್ರ ಸರ್ಕಾರದ್ದಲ್ಲ, ಕೇಂದ್ರ ಸರ್ಕಾರದಲ್ಲಿ ಕನ್‌ಸರ್ವೇಷನ್ ಆ್ಯಕ್ಟ್

ಬಂದಿರುವುದರಿಂದ ಅರಣ್ಯ ಭೂಮಿಯನ್ನು ಅರಣ್ಯೇತರಕ್ಕೆ ಬಳಸಬೇಕಾದರೆ ಕೇಂದ್ರ ಸರ್ಕಾರದ ಅನುಮತಿ ಪಡೆಯಬೇಕು ಎಂದು ಆ ಆಕ್ಟ್ ಹೇಳುತ್ತದೆ. ಹಾಗಾಗಿ ನಮಗೆ ತೊಂದರೆ ಬಂದಿದೆ. ಈ ಮನೆ ಕಟ್ಟಿಕೊಳ್ಳತಕ್ಕಂಥಾದ್ದು, ವ್ಯವಸಾಯ ಮಾಡಿಕೊಂಡು ಅಡಿಕೆ ತೋಟ ಅಥವಾ ಗದ್ದೆ ಮಾಡಿಕೊಳ್ಳುವುದು, ಇತ್ಯಾದಿಗಳೆಲ್ಲಾ ನಾನ್ ಫಾರೆಸ್ಟ್ ಆಕ್ಟಿವಿಟ್ ಆಗುತ್ತದೆ. ಆದ್ದರಿಂದ ಅವರ ಅನುಮತಿ ಪಡೆಯಬೇಕೆಂದು ಇದೆ. ಸುಪ್ರೀಂ ಕೋರ್ಟ್ ಆರ್ಡರ್ ಸರಿಯೋ ತಪ್ಪೋ, ಆ ಮಾತು ಬೇರೆ. ಅದಕ್ಕೆ ನಾವು ತಲೆಬಾಗಬೇಕಾಗುತ್ತದೆ. ಈ ದೃಷ್ಟಿಯಿಂದ ನಾನು ಈ ಸಭೆಯಲ್ಲಿ ತತ್‌ಕ್ಷಣ ನಿಲ್ಲಿಸಿ ಬಿಡುತ್ತೇನೆ, ಹಾಗೆ ಹೀಗೆ ಹೇಳಲಿಕ್ಕೆ ಸಾಧ್ಯವಿಲ್ಲ, ಆಗಲೇ ಹೇಳಿದಂತೆ ಮೇಲ್ಮನೆಯಲ್ಲಿ ಮತ್ತು ಈ ಮನೆಯಲ್ಲಿ ಮಾನ್ಯ ಸದಸ್ಯರುಗಳು ಮತ್ತು ಇಡೀ ಸದನ ನಮಗೆ ನೀವು ಕೇಂದ್ರ ಸರ್ಕಾರದ ಹತ್ತಿರ ಹೋಗಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಸಾಧ್ಯವಾದರೆ ಸುಪ್ರೀಂಕೋರ್ಟ್‌ಗೂ ಕೂಡ ಅರ್ಜಿ ಹಾಕಬೇಕು ಎಂಬ ಮಾತನ್ನು ಹೇಳಿದ್ದಾರೆ. ನಾವು ಸಬ್‌ಕಮಿಟಿ ಮತ್ತೆ ಸೇರಬೇಕು ಎಂದು ಮೊನ್ನೆ ಸಬ್ ಕಮಿಟಿ ವ್ಯಾಪಕತೆಯನ್ನು ಜಾಸ್ತಿ ಮಾಡಿದ್ದೇವೆ. ಎಲ್ಲಾ ಮಂತ್ರಿಗಳು ಬರುತ್ತಾರೆ. ಈ ವಾರದಲ್ಲೇ ಮಂತ್ರಿಮಂಡಲದ ಸಭೆ ಸೇರಿ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ನಾನು ಈಗಾಗಲೇ ಹೇಳಿದಂತೆ ಒತ್ತುವರಿ ಆಗಿರುವಂತಹ ಸರ್ಕಾರದ ಫಾರೆಸ್ಟ್ ಭೂಮಿ ಎಷ್ಟು ಎಂಬ ಬಗ್ಗೆ ರೇಂಜ್‌ವೈಸ್ ಮಾಹಿತಿ ತರಿಸಿದ್ದೇನೆ. ಅದರಲ್ಲಿ ಮನೆ ಎಷ್ಟಿವೆ? ಸರ್ಕಾರದ ಕಟ್ಟಡಗಳು ಎಷ್ಟಿವೆ? ರೋಜ್‌ಗಾರ್ ಯೋಜನೆ ಪ್ರಕಾರ, ಅಂಬೇಡ್ಕರ್ ಯೋಜನೆ ಪ್ರಕಾರ ಇಂದಿರಾ ಆವಾಸ್ ಯೋಜನೆ ಪ್ರಕಾರ ಎಷ್ಟು ಇವೆ ಎಂಬಂತಹ ಎಲ್ಲಾ ಅಂಕಿ ಅಂಶಗಳನ್ನು ತರಿಸಿದ್ದೇವೆ. ಅದನ್ನು ಕುಳಿತುಕೊಂಡು ಪರಿಶೀಲಿಸಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯೊಂದನ್ನು ತೆಗೆದುಕೊಂಡು ಹೋಗಬೇಕು ಎನ್ನುವಂಥಾದ್ದು ಸದನದ ಅಭಿಪ್ರಾಯವಾಗಿದೆ. ಅದನ್ನು ನಾವು ಮಾನ್ಯ ಮಾಡುತ್ತೇವೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಈಗಲೇ ಪರ್ಯಾಯ ಮಾಡುತ್ತೇನೆ ಎನ್ನುವ ಮಾತನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಆ ಮಾತನ್ನು ಹೇಗೆ ಹೇಳಲಿ. ನಾನು ಬುದ್ಧಿಪೂರ್ವಕವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಕಂಟೆಪ್ಟ್ ಆಗತಕ್ಕಂಥದ್ದನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಅವರನ್ನು ಸಹಾಯ ಮಾಡಿ ಎಂದು ಕೇಳಿಕೊಳ್ಳೋಣ. ಯಾವುದನ್ನೂ ಮುಚ್ಚುಮರೆ ಮಾಡದೇ, ಬಚ್ಚಿಡದೇ ಇರುವ ಪರಿಸ್ಥಿತಿ ಎಲ್ಲವನ್ನೂ ಕೇಂದ್ರ ಸರ್ಕಾರ ಮತ್ತು ಸುಪ್ರೀಂ ಕೋರ್ಟ್‌ನ ಗಮನಕ್ಕೆ ತಂದು on humanitarian grounds, ಇಷ್ಟನ್ನು ತೆರವು ಮಾಡಬೇಕು, ಅದನ್ನು ಹೇಗೆ ಮಾಡಬೇಕು ಎಂದು ಕೇಳಿಕೊಳ್ಳಬೇಕೆಂದು ಸರ್ಕಾರದ ವಿಚಾರವಾಗಿದೆ.

1.30 ಪಿ.ಎಂ.

(ಗೊಂದಲ)

ಶ್ರೀ ಬಿ. ಸೋಮಶೇಖರ್ :- ಅಲ್ಲಿಯತನಕ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಅವರು ಹೇಳಲಿ.

ಅಧ್ಯಕ್ಷರು :- ಸುಪ್ರೀಂ ಕೋರ್ಟ್ ಮುಂದೆ ಹೋಗುತ್ತೇವೆಂದು ಹೇಳಿದ್ದಾರಲ್ಲ ಎಲ್ಲರೂ ಒಂದೇ ಸಾರಿ ನಿಂತುಕೊಂಡರೆ ಆಗುವುದಿಲ್ಲ.

(ಗೊಂದಲ)

(ಬಿ.ಜೆ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು)

Mr. SPEAKER:- I am very sorry. ಅವರು ನಾಯಕರುಗಳು ಅವರು ಮಾತನಾಡುತ್ತಿದ್ದಾರೆ. Please excuse me. Don't behave like this. ನಾಯಕರಿದ್ದಾರೆ ಅವರು ಮಾತನಾಡುತ್ತಾರೆ. ಮೇನ್ ಕ್ವೊಶ್ಚನ್ ಅವರು ಕೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು :- ಅವರು ಏನು ಹೇಳುತ್ತಾರೆ ಅದನ್ನು ಬರೆದುಕೊಳ್ಳಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಕೆ.ಹೆಚ್. ರಂಗನಾಥ್‌ರವರಿಗೆ ಇವೆಲ್ಲಾ ಗೊತ್ತಿರತಕ್ಕಂತಹ ವಿಚಾರ. ನಾವು ನಿಮ್ಮಲ್ಲಿ ವಿನಯಪೂರ್ವಕವಾಗಿ ವಿನಂತಿ ಮಾಡತಕ್ಕಂಥದ್ದು ಒಂದು ಪರ್ಯಾಯವಾದ ವ್ಯವಸ್ಥೆಯನ್ನು ಮಾಡಿ ಎಂದು. ಯಾರು ಎನ್‌ಕ್ರೋಚ್ ಮಾಡಿಕೊಂಡು ಬಂದಿದ್ದಾರೆ, ಮನೆಗಳನ್ನು ಕಟ್ಟಿಕೊಂಡು ಇದ್ದಾರೆ ಅವರಿಗೆಲ್ಲ ಅನುಕೂಲ ಮಾಡಿಕೊಡುತ್ತೇವೆಂದು ಭರವಸೆ ಕೊಡಬೇಕು. ಇದು ಮೊದಲನೆಯದು. ಎರಡನೆಯದಾಗಿ ನಿಮ್ಮ ಆಡಳಿತ ಪಕ್ಷದ ಮಂತ್ರಿಗಳು, ನಿಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳು ಅಲ್ಲಿ ಹೋರಾಟದ ಮುಂದಾಳತ್ವ ತೆಗೆದುಕೊಂಡಿದ್ದಾರೆ. ಅಲ್ಲಿ ಏನು ಭಾಷಣ ಮಾಡಿದ್ದಾರೆ ಎನ್ನುವುದು ಸಹಿತ ನಿಮಗೆ ಗೊತ್ತಿದೆ. ಶ್ರೀಮಾನ್ ಬಂಗಾರಪ್ಪನವರು ಇವತ್ತು ಇಡೀ ರಾಜ್ಯದಲ್ಲಿ ನಾನು ಇದರ ಬಗ್ಗೆ ಹೋರಾಟ ಮಾಡುತ್ತೇನೆ, ಯಾರಿಗೂ ಒಕ್ಕಲೆಬ್ಬಿಸುವುದಕ್ಕೆ ಬಿಡುವುದಿಲ್ಲವೆಂದು ಹೇಳಿದ್ದಾರೆ. ನೀವು ಸುಪ್ರೀಂಕೋರ್ಟಿಗೆ ಏನು ಹೇಳಿದ್ದೀರಿ. ನಾವು ಮೇ 31ನೇ ತಾರೀಕಿನ ಒಳಗೆ ಎಲ್ಲಾ ಖಾಲಿ ಮಾಡಿಸುತ್ತೇವೆಂದು ಹೇಳಿದ್ದೀರಿ. ನೀವು ಈ ರೀತಿ ಮಾತನಾಡಿದರೆ ಆ ಬಡವರು ಒಂದೂವರೆ ಲಕ್ಷ ಕುಟುಂಬದವರು ಏನು ಮಾಡಬೇಕು? ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರದ ಈ ಧೋರಣೆಯನ್ನು ನಾವು ನಿಮ್ಮಲ್ಲಿ ಪ್ರತಿಭಟಿಸುತ್ತೇವೆ. ಈ ಗಳಿಗೆಯಲ್ಲಿ ನಾನು ನಿಮ್ಮಲ್ಲಿ ವಿನಂತಿಸಿಕೊಳ್ಳುವುದು ಇಷ್ಟೆ. ಆರು ತಿಂಗಳಾದರೂ ನಿಮಗೆ ಕ್ಯಾಬಿನೆಟ್ ಸಬ್ ಕಮಿಟಿ ಸೇರುವುದಕ್ಕೆ ಆಗಲಿಲ್ಲ. ಪ್ರತಿ ದಿನ ಕ್ಯಾಬಿನೆಟ್ ಸಬ್ ಕಮಿಟಿ ಎಕ್ಸೆಪ್ಯಾಂಡ್ ಮಾಡುತ್ತಿದ್ದೀರಿ. ಇದು ಬಹಳ ಪ್ರಮುಖವಾದ ವಿಚಾರ.

(ಮಾನ್ಯ ಅಧ್ಯಕ್ಷರ ಮೇರೆಗೆ ನಡವಳಿಕೆಗಳನ್ನು ದಾಖಲು ಮಾಡಿರುವುದಿಲ್ಲ)

ಅಧ್ಯಕ್ಷರು :- ಬಹಳ ಪ್ರಮುಖವಾದ ವಿಚಾರವೆಂದು ಹೇಳಿ ಈ ಪ್ರಶ್ನೆಗೆ ಮುಕ್ಕಾಲು ಗಂಟೆ ಕೊಟ್ಟಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಇದಕ್ಕೋಸ್ಕರ ನಿಮಗೆ ಧನ್ಯವಾದಗಳನ್ನು ಹೇಳುತ್ತಿದ್ದೇನೆ. ಇದು ಬರೀ ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲಾಯ ಪ್ರಶ್ನೆ ಇಲ್ಲ. ಮಲೆನಾಡಿನಲ್ಲಿ ಇದು ಇವತ್ತು ಜೀವನ್ಮರಣದ ಪ್ರಶ್ನೆಯಾಗಿದೆ. ಅದಕ್ಕೋಸ್ಕರ ನಾನು ಒತ್ತಾಯಪೂರ್ವಕವಾಗಿ ಕೇಳುವುದು ರೈತರಿಗೆ ಈ ಸಭೆಯ ಮೂಲಕ ಒಂದು ಭರವಸೆ ಕೊಡಿ. ನಾವು ಸುಪ್ರೀಂ ಕೋರ್ಟಿಗೆ ಹೋಗುವವರೆಗೆ ಸಹಿತ, ಕೇಂದ್ರ ಸರ್ಕಾರಕ್ಕೆ ಮನವಿ ಮಾಡುವವರೆಗೆ ಸಹಿತ ಒಕ್ಕಲೆಬ್ಬಿಸುವುದಿಲ್ಲವೆಂದಾದರೂ ಹೇಳಿ.

ಶ್ರೀ ಕೆ.ಹೆಚ್. ರಂಗನಾಥ್ :- ಈ ಸದನ ನಿರ್ಣಯದ ಮುಖಾಂತರ ಏನು ತೀರ್ಮಾನ ಮಾಡಿದೆ ಅದನ್ನು ಪರಿಪಾಲಿಸತಕ್ಕಂತಹ ಭರವಸೆ ಮಾತ್ರ ಕೂಡಬಲ್ಲೆ. ಅದನ್ನು ಬಿಟ್ಟು ನಾನು ಬೇರೆ ಏನೂ ಹೇಳುವುದಕ್ಕೆ ಸಾಧ್ಯವಿಲ್ಲ. I will be committing the

contempt of the House; not only the contempt of the Supreme Court, but also the contempt of the House; ಈ ರೆಸಲ್ಯೂಷನ್ ಪ್ರಕಾರ ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡುತ್ತೇವೆ, ಸುಪ್ರೀಂಕೋರ್ಟಿಗೆ ಮನವಿ ಮಾಡುತ್ತೇವೆ. ಈ ಸದನ ಒಂದು ತಿಂಗಳ ಕಾಲ ನಡೆಯುತ್ತದೆ, ನಾವು ಕೇಂದ್ರ ಸರ್ಕಾರಕ್ಕೆ ಏನು ಮನವಿ ಮಾಡುತ್ತೇವೆ ಅದನ್ನು ಸದನದ ಮುಂದೆ ಇಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಭಾರತೀಯ ಜನತಾ ಪಾರ್ಟಿಯವರು ಬಹಿಷ್ಕಾರ ಮಾಡಿದ್ದರು, ನಾವು ಧರಣಿ ಮಾಡುತ್ತಿದ್ದೇವು, ಆದರೆ ಅವಸರದಲ್ಲಿ ನೀವು ಹೇಳಿದಿರಿ, ಮಾನ್ಯ ಕರಿಯಣ್ಣನವರು ನಿರ್ಣಯವನ್ನು ಓದಿದರು. ಅದರಿಂದಾಗಿ ನಾನು ಮೂಲಭೂತವಾಗಿ ಕೇಳುವುದು ಇವತ್ತು ಮಳೆಗಾಲ ಪ್ರಾರಂಭವಾದರೆ ಅವರೆಲ್ಲಾ ಎಲ್ಲಿಗೆ ಹೋಗಬೇಕು? ಎಲ್ಲಿ ಉಳಿಯಬೇಕು? ಇವತ್ತು, ಅವರು ಹೊರಗಡೆ ನಿಂತಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ :- ನಾವು ಯಾರಿಗೂ ಬಿಡಿಸಿಲ್ಲ. ಇದು ಪ್ರೋಸೆಸ್ ಆಗುತ್ತಿದೆ. ಎವಿಕ್ಷನ್ ಆಗಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಎವಿಕ್ಟ್ ಮಾಡುವುದಿಲ್ಲವೆಂದು ಹೇಳಿ. ನಾವು ಎವಿಕ್ಟ್ ಮಾಡಿಸುವುದಿಲ್ಲ ಎನ್ನುವ ಭರವಸೆ ಕೊಡಿ.

ಶ್ರೀ ಕೆ.ಹೆಚ್. ರಂಗನಾಥ್ :- ಕೋರ್ಟ್ ಏನು ಹೇಳಿದೆ? ಎವಿಕ್ಟ್ ಮಾಡಬೇಕೆಂದು ಹೇಳಿದೆ. ಎವಿಕ್ಟ್ ಮಾಡಬೇಕೆಂದರೆ ನಾವು ಪೂರ್ವಭಾವಿಯಾಗಿ ಏನು ಮಾಡಬೇಕು? ನೋಟೀಸ್ ಕೊಡಬೇಕು ಇದುವರೆಗೆ ನಾವು ಯಾವುದೇ ನೋಟೀಸ್ ಕೊಟ್ಟಿಲ್ಲ. ನಾವು ಯಾರನ್ನೂ ಬಿಡಿಸಿಲ್ಲ. It is in the process.

(ಗೊಂದಲ)

ಅಧ್ಯಕ್ಷರು :- ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು.

(ಜನತಾದಳ-ಎಸ್ ಮತ್ತು ಜನತಾದಳ-ಯು ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು :- ಈ ವಿಷಯವನ್ನು ಸಮಯ ಸಿಕ್ಕಿದಾಗ ಮುಂದೆ ಯಾವತ್ತಾದರೂ ಒಂದು ದಿವಸ ಚರ್ಚೆಗೆ ತೆಗೆದುಕೊಳ್ಳೋಣ. ಇನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, ದಿನಾಂಕ: 3.3.03ರ ಲಿಖಿತ ಮೂಲಕ ಉತ್ತರಿಸುವ 86 ಪ್ರಶ್ನೆಗಳ ಪೈಕಿ 66 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

(*ಅನುಬಂಧ-1)

ಅಧ್ಯಕ್ಷರು :- ಮಂಡಿಸಲಾಯಿತು.*

ಇ. ದಿನಾಂಕ 28-03-03 ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.